ಶಂಕರ ನಾರಾಯಣ ನಾವಡ

ಪುರಾಪುಶೀಗಾರಿ

ಮನೆ ಪ್ರತಿ - ವಿಕ್ರೇತಾ ಪ್ರತಿ

ಬೆಳಕು

(ಆಯ್ದ ಕವನಗಳ ಸಂಕಲನ)

ಕವಿ:

ಅಮ್ಮೆಂಬಳ ಶಂಕರನಾರಾಯಣ ನಾವಡ

ಆಯ್ದವರು:

ಅಮೃತ ಸೋಮೇಶ್ವರ

ಪ್ರಕಾಶಕರು:
ಸಾಹಿತ್ಯಾಂಜಲಿ ಗ್ರಂಥಮಾಲೆ, ಕೋಟೆಕಾರು. ದ.ಕ
Kotekar P.O. Mangalore, S.K
574152

ಅಮ್ಮೆಂಬಳ ಶಂಕರನಾರಾಯಣ ನಾವಡ

ಆಯ್ದವನ ಅರಿಕೆ.

ನನ್ನ ಪ್ರಿಯಗುರುಗಳಾದ ಹಾಗೂ ನನ್ನಂಥ ಅನೇಕರಿಗೆ ಸಾಹಿತ್ಯಾಸಕ್ತಿಯನ್ನು ಮೂಡಿಸಿದ ಸಹೃದಯ ಕನ್ನಡ ಪಂಡಿತರಾದ ವಿದ್ವಾನ್ ಅಮ್ಮೆಂಬಳ ಶಂಕರನಾರಾಯಣ ನಾವಡರ ಕವನಗಳ ಕಣಜದಿಂದ ಎಪ್ಪತ್ತೈದನ್ನು ಆರಿಸುವ ಕಾಯಕ ನನ್ನ ಪಾಲಿಗೆ ಸಂತಸದ ಹೆಮ್ಮೆಯ ವಿಚಾರ. ಈ ವಿಚಾರದಲ್ಲಿ ಗುರುಗಳಿಗೆ ಕೃತಜ್ಞನಾಗಿದ್ದೇನೆ. ಶ್ರೀ ನಾವಡರು ಮುಖ್ಯವಾಗಿ ಕವಿಗಳೆಂದು ಮನ್ನಣೆ ಗಳಿಸಿದವರು. ನವೋದಯ ಸಾಹಿತ್ಯ ಸಂದರ್ಭದಲ್ಲಿ ಸಾಕಷ್ಟು ಹೆಸರು ಮಾಡಿದವರು. ಸೊಗಸಾದ ಶೃಂಗಾರ ಕವನಗಳನ್ನು ಕಟ್ಟಿದವರು. ಸಂಸ್ಕೃತ ಕೃತಿಗಳ ಉತ್ತಮ ಅನುವಾದಕರೆಂದೂ ಗೌರವ ಪಡೆದವರು. 1976 ರಲ್ಲಿ ಇವರಿಗೆ ಅರುವತ್ತು ತುಂಬಿದ ಸಂದರ್ಭದಲ್ಲಿ ಇವರ ಅಭಿಮಾನಿಗಳಿಂದ ಅರ್ಪಿಸಲ್ಪಟ್ಟ 'ಅಮ್ಮೆಂಬಳ ಅರುವತ್ತು' ಎಂಬ ಸಂಭಾವನಾ ಗ್ರಂಥದಲ್ಲಿ ಇವರ ವ್ಯಕ್ತಿತ್ವ ಹಾಗೂ ಕೃತಿಗಳ ಬಗೆಗೆ ಸುಮಾರು ನಲುವತ್ತು ಮಂದಿ ಮಹನೀಯರು ಬರೆದ ಲೇಖನಗಳಿವೆ.

ತಮ್ಮ "ಸಾಹಿತ್ಯಾಂಜಲಿ ಗ್ರಂಥಮಾಲೆ"ಯ ಮೂಲಕ ಅನೇಕ ಕೃತಿಗಳನ್ನು ಶ್ರೀ ನಾವಡರು ಪ್ರಕಟಿಸಿದ್ದಾರೆ. ನನ್ನ 'ತುಳು ಪಾಡ್ದನದ ಕತೆಗಳು' ಹಾಗೂ 'ರುದ್ರಶಿಲೆ ಸಾಕ್ಷಿ' ಎಂಬ ಕಥಾ ಸಂಕಲನಗಳನ್ನು ಶ್ರೀ ಅಮ್ಮೆಂಬಳರು ತಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸಿ ಕೊಂಡಿದ್ದರು. ಸಾಹಿತ್ಯ ಪರಿಚಾರಿಕೆ, ಪ್ರೋತ್ಸಾಹದ ಕೆಲಸಗಳನ್ನು ಇವರು ನಿರಂತರವಾಗಿ, ಸಂತೃಪ್ತವಾಗಿ ನಿರ್ವಹಿಸುತ್ತಾ ಬಂದಿದ್ದಾರೆ. ನಮ್ಮ ಕೋಟೆಕಾರಿನ ಸಾಹಿತ್ಯ ಸಂಘದ ಸ್ಥಾಪಕಾಧ್ಯಕ್ಷರು ಇವರೇ.

ಶ್ರೀ ಅಮ್ಮೆಂಬಳರ ಮಾತಿನಲ್ಲಾಗಲಿ, ಬರಹಗಳಲ್ಲಾಗಲೀ ಸಂದಿಗ್ಧತೆ ಸಂಕೀರ್ಣತೆಗಳಿಲ್ಲ. ಅವರು ನೇರವಾಗಿ ನುಡಿಯುತ್ತಾರೆ, ಬರೆಯುತ್ತಾರೆ. ಮುಚ್ಚಿಟ್ಟು ಹೇಳುವುದು ಅವರಿಗೆ ಸೇರದು. ಹಾಗಾಗಿ ಅವರ ಕೃತಿಗಳಲ್ಲಿ ವಾಚ್ಯವೃತ್ತಿಗೇ ಅಗ್ರಪಟ್ಟವೆಂದು ಹಲವರಿಗೆ ಕಂಡಿದ್ದರೆ ಆಶ್ಚರ್ಯವಿಲ್ಲ. ಕವನವು ಸುಲಭದಲ್ಲಿ ಸಂವಹನ ಆಗಬೇಕೆಂಬುದು ಈ ಕವಿಯ ಆಶಯ.

ಕವಿಯ ವ್ಯಕ್ತಿತ್ವದ, ಮನೋಧರ್ಮದ ಹಲವು ಎಳೆಗಳನ್ನು ಇಲ್ಲಿ ಕಾಣ ಬಹುದಾಗಿದೆ. ಕೆಲವೊಂದು ನಿರ್ದಿಷ್ಟ ಜೀವನ ತತ್ವಗಳ ಮೂಲಕ ಇವರು ಬದುಕಿನಲ್ಲಿ ಬೆಳೆಸ

ಕಂಡವರು. ತಾವು ಕಂಡ ಬೆಳಕನ್ನು ಸಹೃದಯ ಓದು-
ರ ಮನಕ್ಕೆ ಕಾಣಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. ಈ
ಬೆಳಕು ಬಾಡದೆ ಬಹುಕಾಲ ಬಾಳಲಿ ಎಂಬುದು ಅಚ್ಚು-
ಗಾರನ ಆಸೆ.

ಅಮೃತ ಸೋಮೇಶ್ವರ.

'BELAKU' a collection of Selected Poems in Kannada by Ammembala Shankara narayana Navada, Vidwan
Published by Sahityanjali Granthamale
Kotekar, 574152 (D.K.)

Cover Page : D.S. Halla
First impression Feb 1992
Pages VI + 104

Price : 30/-

Printed at :
Chethana Printers,
Kalladka - 574 222
Bantwal (Tq) D.K.

ಪುಟಗಳನ್ನು ತೆರೆದಾಗ.....

ಅರುಣ

ನಸುಗೆಂಪಿನ
ತುಸು ಹಳದಿಯ
ಸಮ್ಮಿಶ್ರಣದೆಸಕ
ಚೆಲುವಾಗಿರೆ
ಹೊಳೆಯುತಲಿರೆ
ಅದೆಯರುಣನ ಗಮಕ

ಕೆಂಬರಲನು
ಅಂಬರದಲಿ
ತುಂಬಿದ ತೆರ ನೋಟ
ಕುಂಕುಮ ರಸ-
ವಂಕಿತವಹ
ವರ ಪಾಟಲ ಮಕುಟ

ಚೆಂದಳಿರನು
ನೆಯ್ದ ದನೂ
ತೊಟ್ಟಿಹ ಸುವಿಲಾಸ
ಕೆಮ್ಮೀಸೆಯು
ಹುಮ್ಮಸವನು
ಇಮ್ಮಡಿಸುವ ಹಾಸ

ರಕ್ತಾಂಬರ
ಸಕ್ತೋದರ
ಕಿರಣದ ಪರಿಪಾಟ
ಕೆಂದ್ಗೆಳದಲಿ
ಬಿಗಿವಿಡಿದಿಹ
ಹವಳದ ಚೆಲು ಚಾಟಿ

ಇಂತೊಪ್ಪಿರೆ
ಸಂತಸದಲಿ
ಮೂಡಣದಲಿ ಅರುಣ
ಮೂಡುತ ದೆಸೆ-
ಗೀಡಾಡಿದ
ನವಕುಂಕುಮ ಕಿರಣ

ಹಕ್ಕಿಯು ಕೊರ-
ಲಿಂಚರ ಹೊರ
ಹೊರಡಿಸಿ ಹಾಡುವನು
ಮಕ್ಕಳ ಮಾ-
ತಾಡಿಸಿ ತಾ-
ನುರೆ ತೊದಲಾಡುವನು

ಸಿಂಗಾರದ
ತಂಗಾಳಿಯು
ತೀಡಿಸಿ ಸುಯ್ಯುವನು
ಕಿರು ಮುಗುಳನು
ಅರಳಾಗಿಸಿ
ನಗಿಸುತ ನಗುತಿಹನು

ನಿದ್ದೆಯು ಪರೆ
ಕೀಳುತಲರೆ
ದೆರೆದಿಹ ಕಣ್ಣುಗಳ
ಬಿರಿದರಳಿಸಿ
ಎಬ್ಬಿಸುವನು
ನಾಡಿನ ಜನರುಗಳ

ಹೊಸ ಹುರುಪನು
ಹೊಸೆಯಿಸುವನು
ಬೀರುತ ಚೈತನ್ಯ
ಉಪಹಾಸದಿ
ಅಪಹರಿಸುವ
ಜಡತೆಯ ಮಾಲಿನ್ಯ

ಅಜ್ಞಾನದ
ಅಂಧತೆಯನು
ಭೇದಿಸಿ ನೇಸರಿದೋ
ಬೆಳಕಿನ ಬೆಳೆ
ತಿಳಿವಿನ ಹೊಳೆ
ಹೊಮ್ಮಿಸಿ ಬರುವನಿದೋ !

ಎಂಬಾ ನುಡಿ
ನಂಬಿಸಿಯುಡಿ-
ಯಿಡುವನು ಮುಂದರುಣ
ಆ ನಿಮಿಷದಿ
ರವಿಯುದಿಸುತ
ಸುರಿವನು ಸುಜ್ಞಾನ !

□ ೧೯೩೫

ಹಿಮ ಸಮಾಧಿ

ಹೇಮಂತ ಋತುಯೋಗಿ ಮೌನದಲಿ ಘನ-ಸಾಂದ್ರ
ಹಿಮ ಸಮಾಧಿ ಸ್ಥಿತಿಯೊಳೊಪ್ಪಿಹನಂ ನಿಶ್ಚಿಂತ
ನಿಶ್ಚಲ ಧ್ಯಾನ ಸನ್ಮುದ್ರೆಯಲಿ ತಪಃಶಾಂತ
ಯತಿಯ ರೀತಿಯನೋತು ನಿಂತಿಹನು! ಹಿಮ ರುಂದ್ರ
ಭಾವದಲಿ ಸಕಲ ಭೂಮಿ-ವ್ಯೋಮ ಕರಗಿಹುದು
ಬೂದು ಬಣ್ಣದ ಲೀಲೆಯಲಿ ವ್ಯಾಪ್ತವಾಗಿರುವ
ಸಾಮಸ್ಯ ಸೂತ್ರದಲಿ ನಿಸ್ಯೂತವೀ ವಿಶ್ವ
ಪ್ರಾಣಿ ಸಂತತಿಯೆಲ್ಲ ಕುಳಿರ ಕಡಲಿನೊಳಾಳ್ದು
ಭೂತದಾವೇಶವಂತಂತೆ ಗಡಗಡ ನಡುಗಿ
ಬೆಕ್ಕಸಂಬಡುತಿಹುದು—ಇದನಾವುದನು ಕೂಡ
ಗಣಿಸದಿಹ ಹಿಮಪುರುಷನಿರವಿನದ್ಭುತ ನೋಡ-
ಅವ್ಯಕ್ತ ಶಕ್ತಿಯಿಂ ವ್ಯೋಮ ವಕ್ಷವನುಡುಗಿ
ಗಿರಿ–ಶೃಂಗ–ಕಾಂತಾರ–ಭೂಮಿಗಳನಾವರಿಸಿ
ನಿಂತಿಹನು ವರ ವಿರಾಡಾಕಾರವನು ವಹಿಸಿ

□ ೧೯೩೫

ಉಷೆ

ಮೂಡಣ ಬಾನಿನ ಕರೆ ನಗಲು
ಕತ್ತಲೆ ಮೊತ್ತವೆ ಪರಿದುಗಲು
ಉಷೆರಮೆ ನಿಶೆರಮೆಯನು ಜಯಿಸಿ
ಮುಂದಕೆ ಬಂದಳು ಛವಿ ಹರಿಸಿ !

ಕತ್ತಲೆ ಕಡಲಲಿ ತಿರೆ ಮುಳುಗಿ
ನಿಶ್ಚೇಷ್ಟಿತವಾಗಿರಲುಡುಗಿ
ಬೆಳಕಿನ ತಿಳಿವನು ಕರುಣಿಸುತ
ಎಬ್ಬಿಸುತಿರುವಳು ನಸುನಗುತ !

ಹೊಸದಾಗರಳಿದ ತಾವರೆವೋಲ್
ಲಕ-ಲಕ ಹೊಳೆವಳು ಉಷೆಯಿವಳು
ಮಗುವಿನ ನಿರ್ವ್ಯಾಜ ಸ್ಮಿತವೋಲ್
ಕಿಲ-ಕಿಲ ನಗುವಳು ನಲಿಯುವಳು

ಈವರೆಗಾದರೆ ತೆರೆದಿರುವ
ಚುಕ್ಕಿಗಳಾಲಿಯ ನಭವಧುವ
ಕಣ್ಣೆವೆ ಕೀಲಿಸಿ ಕರಿಹೊದಿಕೆ
ತೆಗೆಯುತ ಕೊಟ್ಟಳು ಬಿಳಿರವಿಕೆ

ಅರುಣನ ರೌದ್ರದ ರಕ್ತತೆಯು
ಸೂರ್ಯನ ಸೋಜ್ವಲ ಪ್ರಖರತೆಯು
ಉಷೆಯಲಿ ಬೆಸೆಯದು ಶಾಂತತೆಯ
ಮಾರ್ದವವೆಸೆವುದು ಸೌಮ್ಯತೆಯ !

ಅರುಣನ ಭಗಿನಿಯು ಉಷೆ ತರುಣಿ
ನೇಸರ ಮಾತೆಯು ಉಷೆ ರಮಣಿ
ಮಗನನು ಪಡೆಯುತ ಈ ಜಗದ
ಸೇವೆಯನೆಸಗೆಂ ಧಾದರದ
ಹರಕೆಯನರುಹುತ ತಾಯ್ತನದ
ತನ್ನಧಿಕಾರದಿ ನೆರೆವ ಮುದ

ಎಂದೋ ಹಿಂದಿನ ಕಾಲದಲಿ
ಜಗದಲಿ ಜೀವಿಯ ಶೂನ್ಯದಲಿ
ಅಂಧ ತಮಸ್ಸಿನ ಸಮಯದಲಿ
ಪೊಡವಿಗೆ ಸರ್ವ ಪ್ರಥಮದಲಿ
ಬೆಳಕಿನ ಅನುಭವವಾರಿಂದ ?
ಉಷೆವೆಳಗಿನ ಕಿರುಗೆರೆಯಿಂದ !

ಅಂದಿಂದೀವರೆಗಾ ಉಷೆಯು
ನಿತ್ಯ ಸನಾತನೆಯಾಗಿಹಳು !

□ ೧೯೩೭

ಎಳೆನೇಸರು

ಭುವಿಯಲ್ಲಿ ಹಿಮದ ಋತು ಅರೆಗಣ್ಣ ತೆರೆದಿತ್ತು
ರವಿ ಮೂಡಿ ಮೇಲ್ಬಂದು ಇರ್ಗಳಿಗೆ ಸಂದಿತ್ತು

ಮುಚ್ಚಿದ್ದ ಬೆಳ್ಮಂಜು ತೆರೆಯುಗಿದ ತೆರನಿತ್ತು
ಹೆಚ್ಚಿದ್ದ ಕುಳಿರೊರತೆ ಕಾವಿಂಗೆ ಬಾಗಿತ್ತು

ನೇಸರಿನ ಎಳೆಗದಿರು ಹಿಮ ಮಣಿಯ ಮಾಲೆಯನು
ನೇಯ್ದು ನಲಿಯುತಲಿತ್ತು ರಿಂಗಣಂಗುಣಿತವನು

ದಿನಕರನಸಂಖ್ಯಾತ ಕಿರಣಗಳು ಪೂರ್ವದಿಂ
ಸುಸ್ಪಷ್ಟತೆಯನಾಂತು ವಿವಿಧ ವಿಧ ವರ್ಣದಿಂ

ಹರಿತಂದು ಮೋದದಿಂ ತಿರೆಪೆಣ್ಣನಪ್ಪುತ
ಮೃದುಚುಂಬನವನಿತ್ತು ಪುಲಕವನ್ನಾಗಿಸುತ

ಮಿರುಗಿರೆ ಸಹಸ್ರಕರನೆಂಬ ಸಂಕುಚಿತತಾಖ್ಯೆ
ಮಿಥ್ಯವಾಗಲಸಂಖ್ಯಕರನೆಂಬನವ್ಯಾಖ್ಯೆ

ಸಮನಿಸಿದ ತೆರನಾಯ್ತು! ಹೂಬಿಸಿಲು ಹೂಗಳಿಗೆ
ಎಸಳೆವೆಯನಲರಿಸಲು ಹಿಮಬಿಂದು ಜೇನ್ಪನಿಗೆ

ಬೆರೆದೊಂದು ಗೂಡುತ್ತ ತುಂಬಿಗಳಿಗಾಹ್ವಾನ-
ವೀಯಲವು ಬಂದೊಲಿದು ಮಾಡಿದುವು ಮಧುಪಾನ

ಸೌಸವದ ತನಿಜೇನನೊಲಿದೀಂಟಿ ಸೊಕ್ಕೇರಿ
ಅಳಿಗಳೊಂದೇ ಸರದಿ ಸೂಸಿದುವು ಹಾಡ ಸರಿ

ಹಕ್ಕಿಗಳ ಕೊರಲುಲಿಯು ಕಟ್ಟೊಡೆದು ಹೊನಲಾಗಿ
ಬಾನ ದನಿಯುಲೆಯಿಂದ ದುಂದುಮಿಸಿತಿಂಪಾಗಿ

ಬಯಲಿನೊಂದರೆಯಲ್ಲಿ ನಾನಾಗ ನಿಂದಿರಲು
ಮೂಡಣದ ಬಾನ್ ಚೆಲುವು ಚಿಲುಮೆಯಲಿ ಚಿಮ್ಮಿರಲು

ಬಾಲಾರ್ಕನಿದಿರಾಗಿ ನನ್ನ ಕಣ್ಣೆವೆಗಳನು
ಅರಳಿಸುತ ಮುಗುಳಿಸುತ ನನ್ನೆಲ್ಲ ದೇಹವನು

ಎಳೆಬಿಸಿಲ ಮಳೆಯಿಂದ ತೋಯಿಸುತ ಸ್ವರ್ಗೀಯ
ಸಂತೋಷ ಸಾಗರದಿ ತೇಲಿಸುತಲಾತ್ಮೀಯ

ಭಾವವನು ಬೆಳಗಿಸುತ ಮುಗಿಲೋಳಿಗಳ ಮೇಲೆ
ಇರುವೆನಡಿಗೆಯ ನಡೆದು ಬರುತಿದ್ದ ಮೇಲ್ಮೇಲೆ !

ಗಿಡ-ಬಳ್ಳಿಯೆಲೆಗಳಲಿ ನೆಯ್ದಿರುವ ಜೇಡ ಬಲೆ
ನೂಲಿನೆಳೆಗಳು ಚಿನ್ನ ಸರಿಗೆಯಂತಿಹವು ಸಲೆ

ಭೂದೇವಿಯುಟ್ಟಿರುವ ಹಸುರುಡಿಗೆಯಂತೆಸೆವ
ಎಳೆಗಳವೆ ಮಡಿಗಳಿಗೆ ಹೊಂಬಣ್ಣ ರವಿಯೀವ

ಎತ್ತೆತ್ತಲೂ ತಿರೆಯು ಹೊನ್ನ ಹೊಳೆಯಲಿ ತೇಲಿ
ತನ್ನತನವನು ಮರೆತು ಹರಿದು ಸೊಗಗಡಲಿನಲಿ

ಸಂಗಮಂಗೊಂಡಂತೆ ಭಾಸವಾಗುತಲಿತ್ತು
ಒಂದಿನಿತು ಚಣ ಕಳೆಯಲೊಪ್ಪವೇ ಬೇರಾಯ್ತು

ಸ್ವರ್ಣ ಲೇಪದ ಮೇಲೆ ರಜತ ರಸ ಬೆರೆದಂತೆ
ಬಿಸಿಲೊಸರು ಕಣ್ಗೂಟವನ್ನೂಡಿಸಿತು ಮುಂತೆ !

□ ೧೯೪೦

ನಿಸರ್ಗ–ಚಲಚ್ಚಿತ್ರ

ನಿತ್ಯವೂ ವಿಶ್ವರಂಗದ ಪ್ರಕೃತಿ ಮಂಟಪದಿ
ವಿಧ ವಿಧ ಚಲಚ್ಚಿತ್ರಗಳು ಭವ್ಯಭಾವಗಳ-
ನೊಳಗೊಂಡು ನಿಯತ ನವ್ಯತೆಯನ್ನು ಬೀರುತ್ತ
ನಿಷ್ಕಾಮ-ನಿಸ್ವಾರ್ಥ ದೃಷ್ಟಿಯಲಿ ದರ್ಶಿತಗ-
ಳಾಗಿ ಮೆರೆಯುತ್ತಿಹವು

ವಿಶ್ವ ಪುರುಷನೆ ಚಿತ್ರ-
ನಿರ್ದೇಶಕನು ವಿವಿಧ ವಿಹಗ ತತಿಗಳ ಗಾನ
ಲಹರಿಯೇ ಸಂಗೀತ ಮಾಧುರ್ಯ

ಕಣ್ಣೆದಿರ
ಉಷೆನಾರಿ ನದಿನೀರೆ ಯಾಮಿನೀ ಕಾಮಿನೀ
ಬನವೆಣ್ಣು ಸಂಧ್ಯಾವಧೂ-ಆದಿ ಪ್ರಖ್ಯಾತ
ನಟಿಗಳೇ ನಭದೊಳಿಹ ಪ್ರತ್ಯಕ್ಷ ತಾರೆಗಳೆ
ಹೆಸರಾಂತ ತಾರೆಗಳು

ಅರುಣ ದಿನಕರ ಚಂದ್ರ
ಸಾಗರ ವಸಂತಾದಿ ನಟವರೇಣ್ಯರು ನಟಿಪ-
ರೀ ವಿಲಕ್ಷಣ - ನಿತ್ಯ - ನೂತನ - ಯಥಾರ್ಥವಹ
ವರ ಚಲಚ್ಚಿತ್ರ ಪ್ರದರ್ಶನದಿ !

ಆದರಿದ-
ರತಿಶಯಿತ ಸೌಂದರ್ಯ ದರ್ಶನಾನುಭವಕ್ಕೆ
ಬಾಹ್ಯ ಚಕ್ಷುಗಳಿಂದಲೂ ಕೂಡ ಆಂತರಿಕ
ಜ್ಞಾನ ದೃಷ್ಟಿಯು ನೋಟವತ್ಯಧಿಕ ಸಹಕಾರಿ !

□ ೧೯೬೯

ಪ್ರಕೃತಿಯ ಮಡಿಲು

ಸುತ್ತಲು ಕಲ್ಲು !
ಸುತ್ತಿದೆ ಹುಲ್ಲು !
ಕಲ್ಲುಗಳೆಡೆಯಲಿ ತೊರೆಯೊಂದು
ಮೆಲ್ಲನೆ ಹೊನಲಿಡುವುದು ಮುಂದು
ಘುಳು-ಘುಳು ನಾದ
ತೊರೆಯ ನಿನಾದ
ಕೇಳಿಸುತಿರುವುದು ಬಹು ಮೋದ !

ಕರಿ ಕಲ್ಲಿನಲಿ
ಕುಳ್ಳಿರಲಲ್ಲಿ
ಹಾರುತಲಿಹ ತೆಳು ನೀರ ಹನಿ
ಕಾಲನು ತೊಳೆವುದು ತೊರೆಯ ದನಿ
ಮೃದು ಸಂಗೀತವ-
ನೊದವಿಸಿ ಸೊಗವ
ಬೀರುತಲಿರುವುದು ! ಈ ತಾಣ
ಮೋನದ ಶಾಂತಿಯ ನಿಲ್ದಾಣ !

□ ೧೯೩೬

ತಂಗದಿರ !

ವಾರ್ಧಿಕ

ಮುಗಿಲುಗಳ ಮೆಟ್ಟಲಿನ ಮೇಲೆ ಮೆಲುನಡಿಗೆಯಲಿ
ನಗುನಗುತ ಬಿಡದೇರಿ ಬರುತಿರುವೆ ತಂಗದಿರ !
ಒಗುಮಿಗೆಯ ಗಮನದಲಿ ಹೋಗುತಿಹೆ ಯಾವೆಡೆಗೆ ?
ಗುರಿಯೇನು ಗುರುತಿಲ್ಲವೇ ?
ಸೊಗದ ಸನ್ಮಾಂತ್ರಿಕದ ಮಾಟದನುಭವದಿಂದ
ಮೊಗವು ವಿಕಸಿತವಾಗಿ ತೋರುವುದು ಶಶಿ! ನಿನ್ನ
ಸೊಗಸುಗಾರ್ತಿಯ ಮಡದಿ ರೋಹಿಣಿಯ ಬಳಿಗೆಂದು
ವಿಹರಿಸಲು ಪೋಪೆಯೇನು ?

ಅನುದಿನವು ವಿಧು ! ನೀನು ಮೂಡುತಿಹೆ-ಮುಳುಗುತಿಹೆ
ಮನಸಿನೊಳಗಿದಕಾಗಿ ಬೇಸರಿಸಿ ಬಿದಿಯೊಡನೆ
ಅನುನಯದಿ ಮಾಸಕೊಂದಾವರ್ತಿ ದಿನವೊಂದ
ರಜೆಯೆಂದು ಪಡೆದೆಯೇನು ?
ಇನನೊಂದು ವಿಧಿಯಿಂದ ಇನಿತೊಂದು ತಪ್ಪದೇ
ದಿನ ದಿನಂ ಮೂಡುವಂ-ಬಾಡುವಂ ಶಶಿ! ನೀನು
ಹುಣ್ಣಿಮೆಯ ಬಿಟ್ಟುಳಿದ ರಜನಿಯಲಿ ಅನಿತಿನಿತು
ಬೆಳಗಿ ಮರೆಯಾಗುವೇಕೆ ?

ನೀನೋಷಧೀಶನಾಗಿರುವೆಯಾದುದರಿಂದ
ಸಾನುರಾಗದಿ ತರು-ಲತಾಳಿ ಸಸ್ಯಗಳೆಲ್ಲ
ಆನನವನೊಲೆಯುತ್ತಲಿರುತಿಹವು ನಿನ್ನಮೃತ
ಕಿರಣ ಶೀತಸ್ಪರ್ಶದಿಂ
ಕಾನನದಿ ಮಲ್ಲಿಗೆಯು ಮೊದಲಾದ ಕುಸುಮಗಳು
ಸಾನಂದದಿಂದ ನಗುನಗುತ ನೀರಾಜನವ–
ನಾನುವಂತೆಸೆಯುತಿವೆ ಶಶಿ! ನಿನಗೆ ನೀನೆಸಗಿ–
ದುಪಕಾರದರಿವಿಗಾಗಿ

ಎತ್ತಲೂ ತಿರೆಯನ್ನು ತೀವಿ ಜೊನ್ನದ ಸರಿಯು
ಸುತ್ತಲಿಡಿದತಿ ಶೋಭೆಯಾಂತೆಸೆವ ಬಿಳಿ ಮೊಸರ
ಮೊತ್ತ ಚೆಲ್ಲಿದ ತೆರದಿ ಬಿತ್ತರವನಾಂತಿಹುದು.
ಆದರೂ ತಂಗದಿರನೇ !
ಕತ್ತಲೆಯ ಕಾಲವಾದುದರಿಂದ ಮರಗಳಡಿ-
ಯತ್ತ ಬಿದ್ದೊರಗಿಹುದು ನೆರಳ ಕಾಳಿಮೆಯದನು
ಕಿತ್ತಳಿಸಿ ಬಿಸುಡಲಾರದೆ ನಾಚಿ ಮೊಗದಲ್ಲಿ
ಮಾಲಿನ್ಯವನ್ನಾಂತೆಯು ?

ತೊಳತೊಳಗಿ ಬೆಳಬೆಳಗಿ ಕಳೆವೆತ್ತು ಪೊಳೆಯುತಿಹೆ !
ಕಿಲಕಿಲನೆ ನಗುನಗುತ ಹಾಸ್ಯರೋಚಿಯನೆಲ್ಲ
ಬಳಿಗಳಿಗು ಪಸರಿಸುತ ಸಂತೋಷ ಸಾಗರದೊ-
ಳೋಲಾಡಿ ತೇಲಾಡುತ
ಒಲಿಯುತ್ತ ನಲಿಯುತ್ತ ಮುಗಿಲುಗಳ ಮರೆಯಲ್ಲಿ
ನೆಲೆಸುತ್ತ ಹೊರಬರುತ ಕಣ್ಣ ಮುಚ್ಚಾಲೆಯಲಿ
ಲಲಿತ ಲೀಲೆಯನಾಂತು ಬಾಲಕೇಳಿಯ ನಟಿಸಿ
ಮೆರೆವೆಯೇಂ ತಂಗದಿರನೇ ?

□ ೧೯೩೭

ತಾರಾಯಾಮಿನಿ

ಇನಿತೇಕೆ ತೊಳಗುವಿರಿ ತಾರೆಗಳೆ ! ನೀವಿಂತು ?
ಆರ್ಗೆ ಹೊರಗೆಡಹುವಿರಿ ಸೌಂದರ್ಯ ಸುಧೆಯಂ ?
ನಿಮ್ಮ ಚೆಲುವನು ಕಂಡು ಭವದ ಬವಣೆಯ ಮರೆತು
ಒರ್ಚಣವನಾದರೂ ಸೊಗವಡುವನಾವಂ ?

ನೇಸರಾರಲು ಮಬ್ಬಿನುಬ್ಬೇರೆ ಬಾಂಬಯಲೊ-
ಳೊಗೆದು ಕಣ್ ಬಿಡುತಿಹಿರಿ ಬೆಳ್ಪಿನಗೆಯಂತೆ
ಕಗ್ಗತ್ತಲೆಯ ಕರಿಯ ಸೀರೆಯಲಿ ಬೆಳ್ವೊನ್ನ
ಮಿರುಮಿರುಗುವಲರನ್ನು ಕೇವಣಿಸಿದಂತೆ

ಇರುಳ ನೀರೆಯ ಮುಡಿಗೆ ತೆತ್ತಿಸಿದ ಬಜ್ಜರದ
ಪರಲುಗಳ ಪಾಂಗಿನಲಿ ಪೊಂಗಿ ನೀವಿಹಿರಿ
ದೇವನೊಲುಮೆಯ ಜಾಣ್ಮೆಯದ್ಭುತದ ಕೈ ಚಳಕ-
ದೊಂದು ಕೈಪಿಡಿಯ ಪ್ರತೀಕದಂತಿಹಿರಿ

ನಿಮ್ಮಮಿತ ಲಾವಣ್ಯ ಲಹರಿಯನು ಪಡೆದಿಂಟಿ
ವಿಶ್ವ ವೈಚಿತ್ರ್ಯಾಬ್ಧಿಯಲ್ಲಾವನಾಳ್ವಂ ?
ಮನೆಯಿಂದ ಹೊರಬಂದು ಕತ್ತನ್ನು ಮೇಲೆತ್ತಿ
ಚುಕ್ಕಿಗಳೆ ! ನಿಮ್ಮ ಚೆಲುವನು ನೋಳ್ಪನಾವಂ ?

☐ ೧೯೬೪

ಕೋಗಿಲೆ

ಕೋಗಿಲೆ ಕುರೂಪಿಯೆನೆ ರಾಗದಲಿ ಹಾಡುತಿಹ
ಮಧುರ ಸಂಗೀತವಶ್ರಾವ್ಯವಹುದೇನು ?
ಭಾವ-ರಸ ಬೆರೆತಿರುವ ಕೋಗಿಲೆಯ ಸವಿ ಸರವ
ಕೇಳೆನೆಂದಾರಾದರೊರೆಯುತಿಹರೇನು ?

ಮಾಮರದ ಕೊಂಬೆಯಲಿ ಮೂಂದಳಿರ ಮೆಲ್ಲುತ್ತ
ನವ ವಸಂತನ ಗಾನಗೈವ ಕೋಗಿಲೆಯು
ಆಗೊಮ್ಮೆ ಈಗೊಮ್ಮೆ ಕುಹೂ-ಕುಹೂ ಎಂದು
ಮಧುರ-ಮಂಜುಲ ಕಂಠದಿಂದುಲಿಯುತಿಹುದು

ಒಂದೆ ಹಾಡಿನೊಳೆನಿತೊ ಭಾವವನು ಬಿಂಬಿಸುತ
ಮನವ ರಂಜಿಸುತಿರುವ ಪಿಕವು ವರಕವಿಯೊ ?
ಅಲ್ಲದಿರೆ ಶಾರದೆಯು ವರದ ಹಸ್ತವನಿದರ
ಮಸ್ತಕದ ಮೇಲಿಟ್ಟು ಹರಸಿರುವಳೇನೊ ?

ಒಂದೊಮ್ಮೆ ಪಿಕದುಲಿಯು ಮಾನವರ ಕಿವಿದೆರೆಗೆ
ಕೇಳಿದರೆ ಹೃದಯಾಬ್ಧಿ ವೀಚಿಯಾಡುವುದು
ಮಧುಮಾಸದಲಿ ಮೆರೆವ ಕೋಗಿಲೆಯು ಸಾಮಾನ್ಯ
ಪಕ್ಷಿಯಲ್ಲದು ಮಧುರಗಾನ ದೇವತೆಯು !

□ ೧೯೪೩

ಅಂದೊಂದು ದಿನದಲ್ಲಿ –

ಅಂದೊಂದು ದಿನದಲ್ಲಿ ನಿಶಿಯ ನೀರವದಲ್ಲಿ
ಇಂದುವಿನ ತಿಳಿಯಾದ ಬೆಳದಿಂಗಳಲ್ಲಿ
ಹೊಂದಿಯಾನಂದವನು ಬಗೆಯ ಬೇಸರ ಕಳೆಯೆ
ಮಂದಿರದ ಹೊರಜಗಲಿಯಲ್ಲೊರಗಿದೆ

ಮೇಲೆ ನೀಲಾಕಾಶಕೆನ್ನ ದಿಟ್ಟಿಯನಟ್ಟೆ
ಲೀಲೆಯಿಂದಲಿ ಚಂದ್ರ ಸಾಗುತಿಹನು
ಹಲಕೆಲವು ತಾರೆಗಳು ತಮ್ಮ ಪತಿ ವಿರಹವನು
ತಾಳಲಾರದೆ ಮೆಲ್ಲನಡಿಯಿಡುವವು

ಬಂಧು-ಬಳಗವನೆಲ್ಲ ಬಿಟ್ಟು ಕಾಲನಗಾಧ
ಕಂದರದಿ ಮರೆಯಾಗುತಿರುವ ನರರಂತೆ
ಅಂದು ಕೆಲ ತಾರೆಗಳು ತಮ್ಮ ಸಹಚರರನ್ನು
ಹಿಂದುಳಿದು ಕೆಳಬಿದ್ದು ಮರೆಯಾಗುತಿಹವು

ನೀಲಿಮೆಯ ನಭದಲ್ಲಿ ರಜತ ಚಂದ್ರನ ಕಿರಣ-
ಮಾಲೆ ಸಾಲಿಟ್ಟೆಸೆಯೆ ತೆರೆಯ ತೆರದಲ್ಲಿ
ಹಾಲ ಕಡಲಿನ ಪೆಂಪ ಲೀಲೆಯಿಂದೊಳಗೊಂಡು
ಮೇಲೆಯಾಗಸವಿಂದು ತೊಳಗುತಿಹುದು

ಎತ್ತಲೂ ಪ್ರಕೃತಿಯದು ಮೌನ ರಾಜ್ಯದ ಮರೆಯೊ-
ಳೊತ್ತರದಿ ಮಲಗಿ ನಿದ್ದೆಯ ಗೈಯುತಿರಲು
ಸುತ್ತಲಿರುತಿಹ ಬೆಡಗ ನೋಡಿಯುರೆಚಣ ಸರಿಯೆ
ಎತ್ತಣಿಂದಲೊ ಬಂತು ನಿದ್ದೆಯಾವರಿಸಿ

ರಾತ್ರಿಯೆಲ್ಲವು ಸವೆಯೆ ಸವಿಯಾದ ಕನಸಿನಲಿ
ಮತ್ತೆನ್ನನೆಬ್ಬಿಸಿತು ಮೈದಡವುತ
ಹತ್ತಿರದ ಮರ-ಬಳ್ಳಿ-ಗಿಡಗಳೆಲೆಯೆಡೆಯಲ್ಲಿ
ಸುತ್ತಿ ಸುಳಿಯುತಲಿದ್ದ ತಂಗಾಳಿಯು

ತಂಬೆಲರು ತನ್ನ ಸುವಿಲಾಸದಿಂದೆಸೆಯುತ್ತ
ತುಂಬಿ ನವಶಕ್ತಿಯನು ಅಂಗಾಂಗದಲ್ಲಿ
ಬೆಂಬಿಡದೆ ಮೈಯ್ಯನ್ನು ಹಾದು ಹೋಗಲು ನವಿರು
ಬಿಂಬಿಸಿತು ನಲವೊಲಿಯಿತೆನ್ನ ಮನಕೆ

ಎಂದಿಗೂ ಬಾರದಿಹ ಹೊಸ ಹುರುಪು ಬಗೆಯೊಳಗೆ
ಬಂದು ಶಾಂತಿಯ ಕೊಡಲು ಎದ್ದು ಕುಳಿತೆ
ಮುಂದೆ ನಾ ಸುತ್ತಲೂ ಸರಿಯಿಸಲು ನೋಟವನು
ಸುಂದರದ ದೃಶ್ಯವದು ಕಂಡಿತೆನಗೆ—

ಉಷೆಯು ಹೊಸ ಮಿರುಗು ಮೈವೆತ್ತು ರಂಜಿಸುತಿರುವ
ಹೊಸ ವಸ್ತ್ರವುಡಿಸಿಹಳು ಪ್ರಕೃತಿರತಿಗೆ
ಮಿಸುನಿ ಬಣ್ಣವನದಕೆ ಹಚ್ಚುತಿದ್ದನು ಮೂಡು-
ದೆಸೆಯೊಳರುಣನ ಕೂಡಿ ಬರುವ ರವಿಯು

ಉದಯಿಸುವ ನೇಸರಿಗೆ ಸ್ವಾಗತವನೀವಂತೆ
ಉದಯ ಗಾನವನೆಲ್ಲ ವಿಹಗ ತತಿಯು
ಮುದದಿ ಮಾಡುತಲಿದ್ದುವಲ್ಲದೇ ಬಳ್ಳಿಗಳು
ಇದಿರಿನಲಿ ಹಿಡಿದಿದ್ದುವಲರುಗಳನು

ಇಂತೆಸೆವ ನೋಟವನು ಮನದಣಿಯೆ ನೋಡುತ್ತ
ಸಂತಸವನಾಂತೆದ್ದು ಈ ತಿರೆಯೆನು
ಇಂತು ಕಂಗೊಳಿಪಂತೆ ಗೈದ ದೇವಗೆ ನಾನು
ಅಂತರಂಗದಿ ಧನ್ಯವಾದವರ್ಪಿಸಿವೆ

□ ೧೯೩೫

ಕವನ ಕಾಮಿನಿ

ಬಾಲ್ಯ ಕಳೆದೆಯೆಂದು ಲಜ್ಜೆ-
ಯೇನು ಕವನ ಕಾಮಿನಿ ?
ಮೊಗವ ತೋರದೆನಗೆ ನೀನು
ಕವಿಸುತಿರುವೆ ಯಾಮಿನಿ

ಮೊದಲು ತೊದಲುನುಡಿಯೊಳಾದ-
ರೇನು ಭಾವಪೆರೆದೆ ನೀ
ಸಹಜ ಕಲ್ಪನಾವಿಲಾಸ
ಹಾಸವಿತ್ತು ಪಡಿದನಿ

ಆದರೀಗ ನಿನ್ನ ಸುಳಿವು
ವಿರಳವಿರುವುದೀಕಡೆ
ನೆಲೆಸಲೆಂದು ನನ್ನ ಮನದೊ-
ಳಿಲ್ಲವೇನು ನಿನಗೆಡೆ ?

ಎಲೆಯ ಮರೆಯ ಕಾಯಿಯಂತೆ
ತಳಿರ ಮರೆಯ ಮಲರವೋಲ್
ಮುಗಿಲ ಮರೆಯ ತಿಂಗಳಂತೆ
ನೀರ ಮರೆಯ ಮೀನವೋಲ್

ತೋರಿಯಡಗಿ ಕಂಡು ಮುದುಗಿ
ಕಣ್ಣುಕಟ್ಟನೆಸಗುವೆ
ಕಾರ ಹೊನಲಿನಂತೆ ದಡನ
ಮೀರಿ ಹರಿವುದಿಲ್ಲವೆ ?

ನಿನ್ನ ಬಳೆಗಳಲುಗುದನಿಯು
ಕಾಲ ಗೆಜ್ಜೆಯಿಂಚರ
ಈಗ ಕೇಳದಿರಲು ಹೇತು-
ವೇನು ಹಿಂದಿನಾ ತೆರ ?

ತಿಳಿಯಿತೊಂದು ಬಾರಿ ನಗುವ
ಜೊನ್ನ ಹಾಲ ಹುಣ್ಣಿಮೆ
ತಿರುಗಿ ಬರುವುದೊಂದು ಸಾರಿ
ಕಪ್ಪು ಸುರಿವ ಕಾಳಿಮೆ

ಎಳಮೆ ದಾಟಿ ಹಿರಿಮೆಯಾಂತು
ನೋಟ ಮಿಂಚ ಹರಹು ನೀ
ಒಲಿದು ನಲಿದು ನಕ್ಕು ನಗಿಸಿ
ಬಾರೆ ಕವನ ಕಾಮಿನಿ !

ಕುಣಿದು ಮಣಿದು ಮಾಲಿ ತೇಲಿ
ಹಾರಿ ತೂರಿಯೇರಿ ಬಾ
ಹೊಳೆದು ಬಳೆದು ಚೆಲುವು ಚೆಲ್ಲಿ
ಉಕ್ಕಿ ಸೊಕ್ಕಿ ಮಿಕ್ಕಿ ಬಾ

ರಸವಿಶುದ್ಧೆ ರೀತಿಪೂತೆ
ಗುಣ ವಿಭೂಷಿತಾಂಗಿಯೆ !
ಧ್ವನ್ಯಲಂಕಾರಯುಕ್ತೆ
ಭಾವ–ವೃತ್ತಿ ಸಂಗಿಯೆ !

ಕಲ್ಪನಾ ಕುರಂಗವೇರಿ
ಹಾರಿ ಬಾರೆ ಸುಂದರಿ !
ಶುಭ್ರ ಚಂದ್ರಿಕಾ ವಿಲಾಸ
ಲಾಸ್ಯಗೈ ರಸೋದರಿ !

ಸರಸ ಮಧುರ ಸುಧೆಯ ಸ್ನಿಗ್ಧ
ಚುಂಬನವನು ಬಿಂಬಿಸು
ಸಾಂದ್ರ ಪುಲಕವಾಗಿಸುತ್ತ
ಸಗ್ಗ ಸೊಗವನೂಡಿಸು

□ ೧೯೪೨

ಪರಿಣಾಮ

ಮೊದಲು ಮುಂಜಾನೆಯದು ಮುಗುಳು ನಗು ಸಗುತ
ಬಳಿಕ ಮಧ್ಯಾಹ್ನವದು ಬಿರುಸು ನಗೆಯುಗುತ
ಕಡೆಗೆ ಸಂಜೆಯು ಸಮಯ ಸೌಮ್ಯವಾಗುತ್ತ
ಕತ್ತಲೆಯ ಕಾಳಿಮೆಯೆ ಪರಿಣಾಮವು

ಮರದ ರೆಂಬೆಗಳಲ್ಲಿ ಮೊಗ್ಗೆ ಮೊದಲೊಗೆದು
ಸರಿಯಾದ ಸಮಯಕ್ಕೆ ಸುಮವಾಗಿ ಬಿರಿದು
ದಿವಸದವಸಾನದಲಿ ತೊಟ್ಟಿಂದ ಸಿಡಿದು
ಜೀವನವ ನೀಗುವುದೆ ಪರಿಣಾಮವು

ಸೂರ್ಯನಾರಲು ತಾರೆ ಮಸಕು ಮಿನುಗುತ್ತ
ರಾತ್ರಿಯಾಗಲು ತೊಳಗಿ ಬೆಳಗುವುದು ಸುತ್ತ
ಮುಂಜಾವ ಬರಲಂಜಿ ಹಿಂಜರಿಯುತೆತ್ತ
ನಾಮಾವಶೇಷವದು ಪರಿಣಾಮವು

ಅನತಿದೂರದಿ ತೆರೆಯು ಸಾಗರದೊಳೆದ್ದು
ಮುಂದುವರಿಯುತ ಬಂದು ಘೋಷದಿಂದಿದ್ದು
ದಡವನಡಹಾಯ್ದಲ್ಲಿ ಮೌನದಲಿ ಮುಗಿದು
ನೊರೆಯಾಗಿ ಮರೆಯುವುದೆ ಪರಿಣಾಮವು

ಆರಂಭದಲಿ ಬಾಲ್ಯಕಾಲವರಳುವುದು
ಆಮೇಲೆ ಯೌವನದ ಗಾಂಭೀರ್ಯವಿಹುದು
ಕಡೆಗೆ ಮುದುರುವ ಮುದಿಯತನವು ಮಸಗುವುದು
ಬಾಳು ಬರಿದಾಗುವುದೆ ಪರಿಣಾಮವು

☐ ೧೯೩೭

ಮಹಾತ್ಮಾಗಾಂಧಿಗಾಗಿ–

ಸತ್ಯ ಪೂರ್ಣ ಜ್ಯೋತಿ ಬೀರುವ
ಬೆಳಕಿನಲಿ ಮುಂದರಿಯುವ
ನಿತ್ಯ-ನಿರ್ಮಲ ಯೋಗಿ ಸತ್ಯಾಗ್ರಹಿ
ಮಹಾತ್ಮಗೆ ವಂದನಂ

ತಾನು ನಡೆಯುವ ನಡತೆಯಿಂದಲೆ
ಸರಳ ಜೀವನ ಸಾರವ
ಮಾನವರಿಗೊರೆಯಿಸುವ ಮೋಹನ–
ದಾಸಗಿಂದೀ ವಂದನಾ

ತ್ಯಾಗಪೂರ್ವಕವಾದ ಯೋಗದಿ
ವಿಶ್ವ ಶಾಂತಿಯನೊದವಿಸಿ
ಚಾಗದಲಿ ಭೋಗವನು ಕಂಡಿಹ
ಕರಮಚಂದಗೆ ವಂದನಂ

ಶಾಶ್ವತ ಪ್ರೇಮಮಯ ಪಥದಲಿ
ಧರ್ಮವನು ಮುನ್ನಡೆಯಿಸಿ
ವಿಶ್ವ ಸಮತೆಯ ಸಾರಿ ತೋರುವ
ಗಾಂಧಿಗಾಗೀ ವಂದನಂ

ಶ್ರೀ ಮಹಾತ್ಮಾ ಗಾಂಧಿಯೀ ನವ
ಯುಗ ವಿಭೂತಿ ವಿರಾಗಿಯು !
ನೇಮ-ನಿಷ್ಠೆಯ ಶಾಂತಿ-ದಾಂತಿಯ
ಸತ್ಯ-ಸತ್ವದ ಯೋಗಿಯು !

ಇವನ ಭೋಧಾಮೃತವನೀಂಟುತ
ತಣಿದ ಮಾನವ ಮಂಡಲಿ
ಭುವನ ಮಾಸಿತವಾದ ಸತ್ಯ
ಪ್ರೇಮ ಕಾಂಕ್ಷಿಪುದೊಲವಿಕ್ಕಲಿ

ತನ್ನ ಮೋಹನ ಅಮೃತಮಯ ವಾ-
ಣಿಯಲಿ ಜನರನು ಬೋಧಿಸಿ
ಸನ್ನುತವದಾಗಿರುವ ರಾಷ್ಟ್ರದ
ಸೇವೆ ಮಾಡಿಪನೊಲಿಯಿಸಿ !

ಲೋಕ ಕಲ್ಯಾಣದ ಮಹತ್ವೇ-
ಚ್ಛೆಯಲಿ ಸತ್ಯಾಗ್ರಹವನು
ಸಕಲ ಮಾನವ ಮನದಿ ಬಿಂಬಿಸಿ
ಉದ್ಧರಿಸಲುಜ್ಜುಗಿಪನು

ಕರ್ಮಯೋಗಿಯ ಕಾರ್ಯದಲಿ ಸಹ-
ಕರಿಸಿ ಸೇವೆಯನೆಸಗುವ !
ಧರ್ಮ ಮಾರ್ಗ ಧ್ವಜವ ಪ್ರೇಮಾ-
ಕಾಶದಲಿ ಮೇಲೆತ್ತುವ !

□ ೧೯೩೪

ಅನಂತ ಶೂನ್ಯ

ಅನಂತ ಶೂನ್ಯದಾಳದಲಿ
ದುರಂತವಾದಗಾಧದಲಿ
ವಿಶಾಲ ನೀಲ ಮಾಲೆಯಲಿ
ತಾರೆಯೊಂದು ಮೆರೆಯಲಿ !

ಆರಿಗೇನು ಏತಕೆಂದು
ಅರಿಯಲಾರು ಬಲ್ಲರಿಂದು ?
ದಿನವದರಳಿ ಬಾಡಲೆಂದು
ಮಿನುಗಿ ಮಿರುಗಿ ಕಾಂಬುದು !

ತನ್ನ ಬೆಳಕಿದಲ್ಪವೇನೊ
ಇನ್ನು ಲೋಕವರಿಯದೇನೊ !
ಅದರ ತಿಳಿವೆ ಇಲ್ಲವು
ಉದಿಸುತಿಹುದು ನಿತ್ಯವೂ !

ಹಿಂದೆ ಹಗಲು ಮುಗಿದಿದೆ
ಮುಂದೆ ಹಗಲು ಬರಲಿದೆ
ನಡುವೆ ನಿಶಿಯು ಗಗನದೆ
ಒಡನೆ ತಾರೆ ಮಿನುಗಿದೆ !

ಸೂತ್ರಬದ್ಧ ರೀತಿಯಲ್ಲಿ
ಅತ್ತ ಶೂನ್ಯ ವೀಥಿಯಲ್ಲಿ
ನಿಶಿಯ ವಿಪುಲ ಕಾಲದಲ್ಲಿ,
ಎಸೆಯೆ ಹೇತುವೇನದಲ್ಲಿ ?

ಏನೋ– ಏಕೋ– ಅರಿಯದು
ಅನಂತ ಶೂನ್ಯವಿರುವುದು
ಅವನ ಸೂತ್ರದಂತಿದು
ಮಿನುಗುತಿಹುದು ದಿಟವದು !

□ ೧೯೩೪

ಹಿಂದಿನ ಕಾಲದ ಒಂದು ಚಿತ್ರ

(ಕಥಾ ಕವನ)

ಏಳಲಿಕಾರದೆ ಮರಣದ ಶಯ್ಯೆಯೊ–
ಳೊರಗಿಹನೋರ್ವನು ಹಳೆ ಮುದುಕ
ಕಳೆದಿದೆ ಪ್ರಾಯದೊಳೆಪ್ಪತ್ತರ ಗಡಿ
ಸಾಯುವ ಸಮಯವು ಸನಿಯಕಿದೆ
ಬಳಿಕಾ ಮುದುಕನು ಒಂದು ದಿನ
ಅಳಿಯಲು ಬರಡಾಯಿತು ಪ್ರಾಣ.

ಒಂದರ ಮೇಲೊಂದಾಗುತ ನಾಲುಕು
ಸಂದಿವೆ ಮುದುಕಗೆ ಮದುವೆಗಳು
ಪೊಂದಿರೆ ಮರಣವ ನಾಲ್ಕನೆ ಹೆಂಡತಿ
ಮುಂದಕೆ ಮದುವೆಯ ನಿಶ್ಚೈಸಿ
ಎಂಟೇ ವರ್ಷದ ಹುಡುಗಿಯನು
ಮುದುಕನು ಮುದದಲಿ ವರಿಸಿಹನು

ಮುದುಕನ ಸಾವಿನ ಸಮಯದಿ ಹುಡುಗಿಯು
ಬೀದಿಯೊಳೋರಗೆಯುವರೊಡನೆ
ಮುದದಲಿ ಮಣ್ಣಿನೊಳಾಟವನಾಡುತ–
ಲಿದ್ದಳು ಚಿಂತೆಗಳಿಲ್ಲದೆಯೆ!
ಆಗಲೆ ಅಲ್ಲಿಗೆ ಅವಳ ಪಿತ
ಬೇಗನೆ ಬಂದನು ದುಃಖಿಸುತ

ಅಂಧಾಚಾರವನೆಲ್ಲವ ತಪ್ಪದೆ
ತನ್ನಯ ನಿಯಮಾವಳಿಗಳಲಿ
ಒಂದಿಸಿಯಾಚರಿಸುವ ಕರ್ಮಿಷ್ಠ
ಶ್ರೋತ್ರಿಯ ಬ್ರಾಹ್ಮಣನವಳ ಪಿತ
ಆದರಿಂದಾ ಎಳೆ ಹುಡುಗೆಯನು
ಬಾಲ್ಯ ವಿವಾಹಕೆ ತೆತ್ತಿಹನು

ಗಂಡನು ಸತ್ತರು ಕಂಬನಿ ಕರೆಯಲು
ತಿಳಿಯದ ತನ್ನ ಕುಮಾರಿಯನು
ಕಂಡನು ತಂದೆಯು ಬಳಿಕವಳೊಡನೆ
ಹೇಳಿದನಾಗಲೆ ನಯ ನುಡಿಯ
ತಂದೆಯ ಮಾತನು ಕಿವಿಗೊಟ್ಟು
ಕೇಳಿದಳವಳಾಟವ ಬಿಟ್ಟು !

ಮಗಳೇ ! ನೀನೊಂದತಿ ಶುಭ ಕಾರ್ಯವ–
ನಿಂದೆಸಗಲೆ ಬೇಕದರಿಂದ
ಸೊಗದಲಿ ನಿನ್ನಯ ಪತಿಯೊಂದಿಗೆ ನೀ–
ನತಿಹಿತದಲಿ ಬಾಳಲು ಬಹುದು
ಅಲ್ಲದೆ ನಿನ್ನಿಂದೇಳುತಲೆ–
ಯವರನು ನೀನುದ್ಧರಿಸುವೆಲೆ !

ಎಂದುದ ಕೇಳುತಲೊಪ್ಪುತ ಹುಡುಗಿಯು
ಬಂದಳು ಮುದದಲಿ ಮನೆಯೆಡೆಗೆ
ಅಂದವಳನು ಬಳಿಕಂದದಿ ಮೀಯಿಸಿ
ಹೊಸ ಹೊಸ ಉಡುಗೆಯನುಡಿಸುತ್ತ
ಬಗೆವಗೆಯಾಭರಣಾದಿಗಳ
ತೊಡಿಸುತ ಸಿಂಗರಿಸಿದರವಳ

ಬಂಧುಗಳೊಂದಿಗೆ ಮೆರವಣಿಗೆಯಲಿ
ಮುದುಕನ ಶವವನು ಮಸಣದೆಡೆ
ತಂದರು ಆಗಲೆ ತಂದೆಯು ಹುಡುಗಿಯ–
ನಲ್ಲಿಗೆ ಕರೆಯುತ ಕೊಂಡೊಯ್ದು
ಏನೂ ಅರಿಯದ ಆ ಕನ್ನೆ
ನಡೆದಳು ದಿಬ್ಬಣವೆಂದೊಡನೆ

ಚಿತೆಯನು ವಿರಚಿಸಿ ಮುದುಕನ ಶವವನು
ಮಲಗಿಸಿಬಿಟ್ಟರು ಅದರಲ್ಲಿ
ಜೊತೆಯಲಿ ಹುಡುಗಿಯನೊಡನೆಯೆ ಮಲಗುವ
ತೆರದೊಳಗೆಸಗಿ ಪುರೋಹಿತರು

ಮಂತ್ರಗಳೇನನೊ ಹೇಳಿದರು
ತಂತ್ರವಿಧಿ ಕ್ರಿಯೆಗಳ ಮಾಡಿದರು

ಬಳಿಕಾ ಹುಡುಗಿಯ ತಂದೆಯೆ ಕಲ್ಮನ–
ದಿಂದಲಿ ತನ್ನಯ ಕೈಮುಟ್ಟಿ
ಜ್ವಲಿಸಿದನಾಗಳೆ ಕಾಷ್ಠದ ನಾಲುಕು
ಮೂಲೆಗಳಾಪರಿಯೇನೆಂಬೆ !
ಬೆಂಕಿಯು ಮೈಯನು ಮುದ್ದಿಸಲು
ಕನ್ನೆಯು ಕಿಟ್ಟನೆ ಕಿರಿಚಿದಳು !

ಹುಡುಗಿಯು ಚಿತೆಯಿಂ ದುಮುಕುತಲೋಡಲು
ಬಾಂಧವರವಳನು ಬೆದರಿಸುತ
ಹಿಡಿದಾ ಕಾಷ್ಠಕೆ ದೂಡಿದರಾಗಲೆ
ಒಡನೆ ಪುರೋಹಿತ ಶೀಘ್ರದಲಿ
ಪ್ರಾಯಶ್ಚಿತ್ತವ ಮಾಡಿದನು
ಬೆಂಕಿಯ ಬಿರುಸಾಗುರಿಸಿದನು

ಬಾಲೆಯು ಬೆಂಕಿಯ ಬೇಗೆಯ ಸಹಿಸಲಿ–
ಕಾಗದೆ ಕೂಗುತಲಿರುತಿರಲು
ಆಲಿಸಿ ರೋದಿಪ ದನಿಯದು ಕೇಳದ
ತೆರದಲಿ ಡೋಲು-ನಗಾರಿಯನು
ಕಿವಿ ಕಿವುಡಾಗುವ ರೀತಿಯಲಿ
ಮೊಳಗಿಸಿಬಿಟ್ಟರು ಬೇಗದಲಿ

ತಿರುಗಾ ಬಾಲಿಕೆ ಬಾರದ ತೆರದಲಿ
ಬಿದಿರಿನ ಉದ್ದದ ಕೋಲಿನಲಿ
ಉರಿಯುವ ಕಿಚ್ಚಿಗೆ ದೂಡುತಲೊತ್ತಿ
ಹಿಡಿದರು ಕೆಲವರು ಬಂಧುಗಳು
ಹುಡುಗಿಯ ಮೆಲ್ಲೊಡಲಗ್ನಿಯಲಿ
ಐಕ್ಯವದಾಯಿತು ಶೀಘ್ರದಲಿ

ಆ ಸುಡುಗಾಡಿನ ಸುತ್ತಿನೊಳೆಲ್ಲಿಯು
ಸಟ್ಟಿರುಳಿನ ನೀರವತೆಯಲಿ
ಬೀಸುವ ಗಾಳಿಯು ಹೊಯ್ಲಿನೊಳೀಗಲು
ಕೇಳಿಸುತಿರುವುದು ಕೀರುದನಿ !
ಕನ್ಯೆ ಪಿಶಾಚಿಯು ರೂಪಾಂತು
ತಿರುಗುವಳೆಂದೊರೆಯುವರಿಂತು !

□ ೧೯೩೭

ಎಲೆ ನೋವೆ !

ಎಲೆ ನೋವೆ ! ನೀನೋವದಿಹ ಸುಕೃತಿಯಿರನೇ ! ॥ ಪಲ್ಲವಿ ॥

ತನ್ನೊಂದದೃಶ್ಯವಹ ದುರ್ದಮ್ಯ ಶಕ್ತಿಯಿಂ
ಚೇತನಾತ್ಮಕ ದೇಹಿಗಳನದುಮಿ ನಿಂದು
ಪ್ರಾಚುರ್ಯದಲಿ ತಾನೆ ತಾನಾಗಿ ನೆರೆ ಸಂದು
ಸಾರ್ವತ್ರಿಕ ಪ್ರಗತಿಯಲಿ ಮೆರೆಯುವೆ
ಧನಿಕರನು ಸೋಲಿಸುವೆ
ಬಡವರನು ಗೆಲುವೆ
ಕನಿಕರವನುಳಿದಿರುವೆ
ದಯೆಯ ದಾಟಿರುವೆ ! ॥ ೧ ॥

ಕಣ್ಣಿಗೆಟಕದೆ ಜೀವವನು ಕೊರೆದು ಕೊನೆಯುತಿಹ
ಕಣ್ಣುಕಟ್ಟನ್ನರಿತ ನೀ ವಜ್ರಕೀಟ !
ಮೃತ್ಯುವಿನ ಸಹಚರನೆ ! ನಿನ್ನಧಟ ನಾನರಿಯೆ
ಶಾಂತಿ-ಸುಖಗಳ ನಿತ್ಯ ಶತ್ರುವೇ ನೀನು ?
ಆದರೊಂದೊಳ್ಗುಣವು
ನಿನ್ನೊಳಾಶ್ರಯವು
ಧನಿಕ-ದೀನರೊಳೆಲ್ಲ
ಸಮ ಭಾವವಿಹುದು ॥ ೨ ॥

ನೋವೆ ! ನೀನಿಲ್ಲದಿರೆ ಏರಿಳಿತ ಸುಖ-ದುಃಖ
ಮೊದಲಾದ ದ್ವಂದ್ವಗಳ ಅಸ್ತಿತ್ವವಿತ್ತೇ ?
ನಿನ್ನಿಂದ ವಿಶ್ವದಲಿ ವಿವಿಧತೆಯು ಮನೆ ಮಾಡಿ
ಸೌಗದ ಮೌಲ್ಯಕೆ ಬಂತು ಹಿರಿಯತನವು
ಆದರಿಂದ ಸೃಷ್ಟಿಯಲಿ
ನಿನಗಿರುವುದು
ಚ್ಯುತಿಯಿರದ– ಆದರೇಂ ?
ನುತಿಹೀನದಿರವು ! ॥ ೩ ॥

□ ೧೯೩೮
ಜೇಕು / ೨೭

ಕಗ್ಗಲ್ಲ ಕಾವ್ಯ

ಔನ್ನತ್ಯ-ಸೌಂದರ್ಯ ಭಾವೈಕ್ಯದಾನಂದ
ಮೂರ್ತಿಯೇ ಮೆರೆಯುತಿದೆ ಕಣ್ಮುಂದೆ ಕಾಣುತಿದೆ
ನಶ್ವರದ ಸುಖ - ಭೋಗ - ರಾಗಾದಿ ನಿಗ್ರಹದೆ
ಮೈವೆತ್ತ ನಿಶ್ಚಲ ತ್ಯಾಗ - ಯೋಗಾಮಂದ
ಸನ್ಮುದ್ರೆ ಮೊಗದಲ್ಲಿ ಕಳೆಗೂಡಿ ಕುಣಿಯುತಿದೆ
ಪ್ರಾಕ್ತನದ ಬಾಹುಬಲಿ ವೈರಾಗ್ಯ ಸಂಸ್ಥಾನ–
ದೊಂದು ಮೈಸಿರಿಯಲ್ಲಿ ಕಾರ್ಕಲ್ಲಿನಾ ಕವನ
ರೂಪದಲಿ ಕೋದಿಹುದೆ - ಶಿಲ್ಪಕಲೆಯಾಶ್ರಯದೆ ?

ಓ ಶಿಲಾ ಕಾವ್ಯರ್ಷಿ ! ನಿನ್ನತುಲ ಸಾಮರ್ಥ್ಯ–
ದರಿವೊಂದೆ ಈ ತೆರಂ ಕಗ್ಗಲ್ಲ ಕಾವ್ಯದಲಿ
ಕಂಡರಿಸಿದಂತಿಹುದು ರಸ - ಭಾವದೋಜೆಯುಲಿ
ನಿನ್ನ ಕೈವಾಡದಲಿ ಕೊನರಿಡಿದು ಸಾಹಿತ್ಯ
ಮಾರ್ಗವನ್ನಾಂತಿಹುದು ನಿನ್ನಮರ ಕಾವ್ಯವಿದು
ಮೌನ ಹೃದಯೋಪಾತ್ತ ಭಾಷೆಯಲಿ ಬೆಸೆದಿಹುದು !

□ ೧೯೩೭

ದ್ವಂದ್ವ

ಒಂದು ಕಡೆ ಸಂತೋಷ-ಸುಖದ ಸಾಮ್ರಾಜ್ಯಮಯ
ನಂದನ ಸ್ವರ್ಗದ ಸಮಾವೇಶವಿಹುದು
ಬೇರೊಂದು ಕಡೆ ಬೇನೆ-ಬೇಸರಿಕೆ-ಬಿಸುಸುಯ್ಗ–
ಳೇರಿರುವ ನಲವಿರದ ನರಕವಿಹುದು

ಒಂದು ಕಡೆ ಮದುವೆ-ಮಾಸಿರಿ ಬೆಡಗು-ಬಿನ್ನಣಗ–
ಳೊಂದಿರುವ ಶೃಂಗಾರ ಸೌರಭ್ಯವಿಹುದು
ಬೇರೊಂದು ಕಡೆ ವಿರಸ ವಿರಹದುರಿಯೆದ್ದಿರುವ
ನೈರಾಸ್ಯ-ಸಂತಾಪ ಸಂರೋಧವಿಹುದು

ಒಂದೆಡೆ ಮನೋಹರ ಮೃದಂಗ ಸಂಗೀತ ಜಯ–
ದುಂದುಭಿಯ ಮಂಗಲ ಧ್ವಾನವಿಹುದು
ಬೇರೊಂದು ಕಡೆ ರೋದನದ ಕೀರುದನಿ ಸುಯ್ವ
ಮಾರುದ್ದ ನಿಟ್ಟುಸಿರ ನಾದವಿಹುದು

ಒಂದು ಕಡೆ ಕಿಲಕಿಲನೆ ನಗುತಿರುವ ಮೃದು ಹಸಿತ–
ದಿಂದಾದ ಮೆಲ್ಲುಲಿಯ ಬಿನದವಿಹುದು
ಬೇರೊಂದು ಕಡೆ ಮನವ ಮುಸುಕಿರುವ ಶೂನ್ಯತೆಯ
ಬೀರುತಿಹ ಚಿಂತಾನಲ ಜ್ವಾಲೆಯಿಹುದು

ಒಂದು ಕಡೆ ಧನಿಕರಾಡಂಬರದ ಸಂರಂಭ–
ದೊಂದು ಮುದ-ಮದಯುತ ವಿಲಾಸವಿಹುದು
ಬೇರೊಂದು ಕಡೆ ಬಡವರಾನುವಾ ಹಸಿವಿಂದ
ಮೀರಿ ತೋರುವ ಬನ್ನ ಬಾಳ್ವೆಯಿಹುದು

ಒಂದು ಕಡೆ ನಳನಳಿಸಿ ನಲಿಯುತ್ತ ಬೆಳೆಯುತ್ತ
ಬಂದಿರುವ ಪಚ್ಚಪಸುರಿನ ಪೈರದಿಹುದು
ಬೇರೆ ಕಡೆ ಬೆಂಗದಿರ ಬೀರುತಿಹ ಬಿಸಿಲಿಂದ
ಗಾರಾದ ನಿಷ್ಪ್ರಯೋಜನ ಭೂಮಿಯಿಹುದು

ಒಂದು ಕಡೆ ಸುರಿಯುವ್ವೈಕಿಲ್ಲೋನೆಯಿಂ ಸೆಡೆದು
ನಿಂದಿರದೆ ಗಡಗಡನೆ ನಡುಗುತಿರಬಹುದು
ಬೇರೊಂದು ಕಡೆ ಸೆಕೆಯ ಕಾಮಿನೌಷ್ಣ್ಯವನಾನ-
ಲಾರದೇ ಸಂಕಟಂಬಡುತಲಿರಬಹುದು

ಒಮ್ಮೆ ಸಮರದಿ ವೀರ-ವಿಜಯ ವಧು ಸಾಹಸದ
ಸಮ್ಮೋದದಿಂ ಸಾರ್ದು ಸಿರಿಯನುಗಬಹುದು
ಮತ್ತೊಮ್ಮೆ ಹೇಡಿತನವಡಸಿರಲು ಹಂದೆಗೊಲಿ-
ದತ್ತಲೈತರಲಾರ್ಪಳಪಜಯಾಂಗನೆಯು

—ಇಂತೆಸೆವ ವಿಧವಿಧ ವಿರುದ್ಧ ವಿಜ್ಞಾನಗಳ-
ನಾಂತಿಹುದು ಸಂತತಂ ತಿರೆಯಂತರಂಗ
ಇದರ ಚೆಲುವನು ನೋಡಿ ನಲವಾಂತು ವಿಶ್ವಪತಿ
ಪುದಿದ ಬಿನದದಿ ಮುಗುಳುನಗುತಲಿರಬಹುದು

ಈ ದ್ವಂದ್ವಗಳಲೆಲ್ಲ ಸಾಮ್ಯವನ್ನಳವಡಿಸಿ
ಸಾಧಿಸುತ ಸಾಮರಸ್ಯವ ಸಂಧಿಸಿ
ಯೋಗವನು ಯೋಜಿಪುದೆ ಯೋಗಿಯೆಂದೆನಿಸುವುದೆ
ಯೋಗೇಶ್ವರಂ ಬೋಧಿಸಿದ ಗೀತೆಯರಿವು

□ ೧೯೩೮

ಮೋಹನ ಮುರಲಿ

ಶಾರದ ಚಂದ್ರನು ಬಾನಿನ ನೀಲಿಗೆ
ಬೆಳ್ನಗು ಹೂವನು ಮುಡಿಸಿಹನು
ದಧಿ ಧವಲಾಚ್ಛ ಜ್ಯೋತ್ಸ್ನಾಲಹರಿಯು
ಭೂಮಿಗೆ ಬರಿಸಿತು ಪುಲಕವನು

ಮಲಯ ಸಮೀರನು ಯಮುನಾ ಜಲದೊಡ-
ನಾಡುತ ತೀಡುತ ಬರುತಿಹನು
ವೃಂದಾವನದಲಿ ಧ್ಯಾನಾವಸ್ಥಿತ
ವೃಕ್ಷಗಳೋಳಿಯನೆಬ್ಬಿಪನು

ವನದಲಿ ಹರ್ಷೋನ್ಮತ್ತ ಕಿಶೋರ ಮ-
ನೋಹರ ಕೃಷ್ಣನು ವಿಹರಿಪನು
ಪ್ರಕೃತಿಯ ಸೌಂದರ್ಯಾಮೃತ ಸಾಗರ
ವೀಚಿಗಳೋಳಿಯೊಳಾಳುವನು

ಅವನ ಕರಾಗ್ರದಿ ಚೇತನವಿಲ್ಲದ
ವೇಣುವು ಜೀವವನಾಂತಿಹುದು
ತುಟಿಗಳ ಸೊದೆಯನು ಹೀರುತ ಮೆಲ್ಪಿನ
ನಾದ ಸಮುದ್ರವನುಕ್ಕಿಪುದು

ಸವಿಗೊಳಲಿನ ಸರವೆಳೆಗೊಲ್ಲತಿಯರ
ಚಿತ್ತವ ಚಂಚಲವಾಗಿಸಿತು
ಹಾಸಿದ ಹಾಸಿಗೆಯನು ತನುವುಳಿಯಿತು
ಮನವಿಂಚರದಲಿ ಮುಳುಗಿತ್ತು

ಮುರಲೀ ನಾದಕೆ ತಾಳವನಿಕ್ಕುತ
ಕಾಲ್ ಮುನ್ನಡೆಯಿತು ವನದೆಡೆಗೆ
ಕೊಳಲುಲಿಯುವರನು ಸೆಳೆಯಿತು ತಂದಿತು
ಲೀಲಾ ಗೋಪಾಲಕನೆಡೆಗೆ

ಬಿಡುಜಡೆಯೆಳಲುವ ಕಾಂತಿಯು ಕಣ್ಗಳ
ಕೆಂಪಿನ ಕೆನ್ನೆಯ ಕನ್ನೆಯರು
ಮುಕುಲಸ್ತನಗಳ ನಳಿತೋಳ್ ಬಳ್ಳಿಯ
ಕಿರುನಡುವೆರಸಿದ ಚೆನ್ನೆಯರು

ಓಡುತ ಹಾರುತ ನಲಿಯುತ ನೆಗೆಯುತ
ತಮ್ಮನು ತಾವೇ ಮರೆಯುತ್ತ
ಕುಣಿಯುತ ಮಣಿಯುತ ಬಂದರು ನಿಂದರು
ನಂದ ಕುಮಾರನ ಬಳಸುತ್ತ

ನೂತನ ಜಲಧರ ನೀಲ ಶರೀರನು
ಪೀತಾಂಬರವನ್ನುಟ್ಟವನು
ಕುಟಿಲಾಲಕ ಚಯ ಚಿತ್ರಿತ ಫಾಲನು
ಮುಗ್ಧ ಸ್ನಿಗ್ಧಾಂಬಕಯುತನು

ಚಂಚಲ ಕುಂಡಲ ಮಂಡಿತ ಗಂಡ–
ಸ್ಥಲ ಯುಗ ಸಂಶೋಭಿತ ಮುಖನು
ನವಿಲಿನ ಗರಿಯ ಕಿರೀಟವನಾಂತಿಹ
ವನಮಾಲಿಯು ನಡು ನಿಂದಿಹನು

ಸಪ್ತ ಸ್ವರದಲಿ ವಿಧ ವಿಧ ರಾಗವ
ಸಿರಿಗೊಳಲಿನ ಮುಖ ಸೂಸಿತ್ತು
ಕಾಳಿಂದಿಯು ಹೊನಲಿಡುವುದ ಮರೆಯುತ
ಆಲಿಸುತಂತೆಯೆ ನಿಂದತ್ತು

ಪಶು ಮೃಗ ಗಣಗಳು ತಮ್ಮೆಡೆಯನು ತೆರೆ-
ದಿಂಚರವನು ಮೊಗೆದೀಂಟಿದುವು
ಮರಗಳು ಎಲೆಗಿವಿಗಳನುರೆ ನಿಮಿರಿಸಿ
ಗೀತಾಮೃತದಲಿ ಮುಳುಗಿದುವು

ಜಡ ಪ್ರಕೃತಿಯು ಚೈತನ್ಯವನಾನುತ
ಗಾನಾನಂದದಿ ಬೆರೆದತ್ತು
ಗೋಪೀವೃಂದವು ಶ್ರೀ ಕೃಷ್ಣಾತ್ಮದೊ-
ಳೈಕ್ಯಾಮರತೆಯು ಗಳಿಸಿತ್ತು

□ ೧೯೪೩

ಉಮರ ಸಂದೇಶ

ನಶ್ವರವು ಜಗದಲ್ಲಿ ನರನ ಬಾಳದರಿಂದ
ಇರುವಲ್ಪದಿನಗಳಲಿ ವ್ಯಥೆ-ಚಿಂತೆಯೇಕೆ ?
ಮೃತ್ಯುವೊಂದತಿಸತ್ಯವಾಗಿರಲು ನಾವಿಂದು
ಸುಖ ಹೀರಬೇಕು ನಾಳೆಯನೆಣಿಸಬೇಕೇ ?

ಸತ್ತ ಮೇಲೇನೆಂದು ತಿಳಿದವರು ಯಾರಿಲ್ಲ
ಎಷ್ಟೊ ಜನ ಹೋಗಿಹರು ಬಂದವರ ಕಾಣೆ
ಸೊಗವಡುವುದೇ ನಾಕವಳಲುವುದೆ ದಿಟ ನರಕ
ಸತ್ತ ಮೇಲೆಲ್ಲರೂ ಒಂದು ಹಿಡಿ ಮಣ್ಣೇ

ವಿಧಿಯದೃಷ್ಟದ ಬಲುಮೆ ನರನ ಕುಣಿಸುವುದಿಲ್ಲಿ
ಬಂದುದನ್ನನುಭವಿಸಬೇಕು ಕೊರಗುವುದೇ ?
ಹಿರಿಯಾಸೆ ಬೇಡ ಮಿತ ಸರಳತೆಯೆ ಸಾಕೆಮಗೆ
ಇಹ ಸುಖವು ಶೂನ್ಯವೆನೆ ಪರವು ದಿಟವಿಹುದೇ ?

ಪ್ರೇಮವೆಂಬುದೆ ಮುಖ್ಯ ದ್ರಾಕ್ಷಾಸವವೆ ಸೌಖ್ಯ
ನಲ್ಲೆಯುಗುರಿನ ಸಿತಾರದ ಮಿಡಿತದಿಂಪು
ಮನದನ್ನೆ ತುಟಿಯೊತ್ತು ನಲ್ಗಬ್ಬ ಬಳಿಯಿರವು
ಇಷ್ಟಿರಲು ರೊಟ್ಟಿಯಿರ ಅದೆ ಸಗ್ಗ ಸೊಂಪು

ಪುಣ್ಯವೋ ಪಾಪವೋ ಮಸಣದೊಳಗೊಂದೆ ತೆರ
ನಮ್ಮ ಮೈ ಮಣ್ಣಾಗಿ ಘಟವಾಗಬಹುದು
ಇಂದು ಮನವನು ಸೂರೆಗೊಂಡ ಸೊಬಗೇ ನಾಳೆ
ದೂಳಿನಲಿ ದೂಳಾಗಿ ತಿರುಗಿ ಹೂವಹುದು

ಎಷ್ಟು ಸುಖ ಪಡೆದಷ್ಟು ಲಾಭವೇ ನಮಗಹುದು
ನಶ್ವರದ ಲೋಕದಲಿ ತಡದಿರವು ಸಲ್ಲ
ಬಾ ಹೀರು ಮಧುವನ್ನು ತಡವೇಕೆ ? ತಡೆಯೇಕೆ ?
ಉಮರ ಸಂದೇಶವಿದು ಆಲಿಸೀ ಸೊಲ್ಲ □ ೧೯೪೫

ವಿಶ್ವ ಶಾಂತಿ

ಸತ್ತವರ ಬದುಕಿಸಲು ನಾವರಿಯದಿರುವಾಗ
ಜೀವಿಪರ ಕೈಯಾರೆ ಕೊಲ್ಲುವುದು ತಪ್ಪು
ವಿಶ್ವದ ಸಮಸ್ತ ಮಾನವರೊಂದೆ ಜಾತಿಯಿಹ–
ರಂತರದ ಕಲ್ಪನೆಯು ಬರೆ ಮೌಢ್ಯ ಬೆಪ್ಪು!

ದಯೆಯೇ ಧರ್ಮದ ಮೂಲ ಹಿಂಸೆಯೆಂದರೆ ಪಾಪ
ಇದ್ದಷ್ಟು ಸಂತೃಪ್ತಿ ಮಾನವ ಪ್ರೇಮ
ಇವೆ ಸತ್ಯ ಸಂಸ್ಕೃತಿಯ ಸಾರ ಸರ್ವಸ್ವವೆನೆ
ಭೂಷಣವೆ ಹಿಂದಿನಂತೆಯೆ ಯುದ್ಧ ಕಾಮ?

ಸಾಹಿತ್ಯ-ವಿಜ್ಞಾನ-ಕಲೆಗಳಲಿ ಮುಂದಿಹೆವು
ನಾಗರೀಕತೆಯಲ್ಲಿ ಪ್ರಗತಿಯಾಂತಿಹೆವು
ಎಂಬ ಜಂಭದ ರಾಷ್ಟ್ರಗಳಲಿ ಕಾಡಿನ ಪಶುಗ–
ಳಂತೆ ಮಾರಣಯಜ್ಞ ಲಜ್ಜೆಗಾಸ್ಪದವು

ಎಷ್ಟೆಷ್ಟೊ ಸತಿಯರನು ಪತಿಗಳಿಂದಗಲಿಸಿದ
ಮಕ್ಕಳನು ಕಂಬನಿಯ ಮಳೆ ಕರೆಯಿಸಿರುವ
ಬಂಧು-ಬಳಗವ ಗೆಳೆಯ-ಗೆಳತಿಯರ ಕೂಗಿಸಿದ
ರಣ ಯಾಗಕಾಯ್ತು ಪೂರ್ಣಾಹುತಿಯು ಭಾವ!

ಸೋತವರ ಗೆದ್ದವರು ಕಾಲ್ಕೆಳಗೆ ತುಳಿಯುವುದು
ಸ್ವಾರ್ಥ ಸಂಪೋಷಣೆಗೆ ಮರ್ದನದ ರೀತಿ
ರಾಷ್ಟ್ರ-ರಾಷ್ಟ್ರಗಳಲ್ಲಿ ಭೇದ ಕಲ್ಪನೆಯಿಷ್ಟು
ಬರುವ ಯುದ್ಧಕೆ ಮೂಲ ಮೆರೆಯುವುದನೀತಿ

ವಿಶ್ವ ಸಾಗರದಲ್ಲಿ ಯುದ್ಧೋರ್ಮಿ ನಿಂತಿರಲಿ!
ದ್ವೇಷಾಗ್ನಿಯುದ್ಗಮಿಸಿ ಕಿಡಿ ಸಿಡಿಯದಿರಲಿ!
ಗಾಳಿಯಲಿ ಸರ್ವ ಸಮತಾ ಭಾವ ಕಂಪಿಡಲಿ!
ವಿಶ್ವ ಶಾಂತಿಯ ಕಹಳೆ ಭೋರ್ಗರೆಯುತಿರಲಿ!

□ ೧೯೪೫

ಬಾಳ ಗೆಳತಿ

ಬಾಳ ಗೆಳತಿ ! ಬಾಳಿನೊಡತಿ
ನಲುಮೆಯೊಂದು ಮೂರುತಿ
ನನ್ನ ನಿನ್ನ ಪ್ರೇಮದೀಪ
ಬೆಳಗಲೊಲವಿನಾರತಿ

ಕಾಮದೊಂದು ಯಂತ್ರವಾಗಿ
ನನ್ನ ಬಳಿಗೆ ಸುಳಿಯದೆ
ಪ್ರೇಮದೊಂದು ಮೌನ ಮಂತ್ರ
ವಾಗಿಯರಳಿಸೆನ್ನದೆ

ಪ್ರೀತಿಯಮೃತವರ್ತಿಯಲ್ಲಿ
ಜೀವ ಜ್ಯೋತಿ ಬೆಳಗಲಿ
ನೀತಿ ನೇಹವಾರದಿರಲಿ
ಕರಿಕುಗಟ್ಟಿದುರಿಯುಲಿ

ಪ್ರೇಮಯೋಗದಿಂದ ನಮ್ಮ
ಚಿತ್ತ ಬೆಸುಗೆ ಪಡೆಯಲಿ
ಸಾಮಗೀತದೊಂದು ಮಿಡಿತ
ಹೃದಯ ವೀಣೆ ನುಡಿಯಲಿ

ಒಲುಮೆಯೊಂದರದುವೆ ಬಾಳ್ವೆ–
ಗೊಂದು ಬೆಳಕಿನಲೆಯಿದೆ
ನಲುಮೆ ಸೊದೆಯ ಸೋಕಿನಿಂದ
ನೋವು ನಂಜು ಕರಗಿದೆ

ದೇವದೇವನರ್ಥವಿಹುದು
ಪ್ರೇಮ ಭಾವ ರೀತಿಯು
ಜೀವ ಜೀವ ಸಾಮರಸ್ಯ–
ವೊಂದೆ ಪ್ರೀತಿ ನೀತಿಯು

□ ೧೯೪೮

ನನ್ನಾಕೆ

ಜೌವನದ ಬಟ್ಟಲಲಿ ಪ್ರೇಮಸುಧೆಯನ್ನೆರೆದು
ಕುಡಿಸುತಿಹ ನನ್ನಾಕೆಯಿರೆ ಸಗ್ಗವೇಕೆ ?
ಜೀವಮಧುಕರನವಳ ಮುಖಕಮಲದಿಂದೊಲಿದು
ಸೌಂದರ್ಯ ಮಧುವೀಂಟುತಿರೆ ಬೊಮ್ಮ ಬೇಕೇ ?

ಎತ್ತ ನೋಡಿದರತ್ತಲವಳ ಮೊಗಚಂದಿರನು
ಮುಗುಳುನಗು ಬೆಳದಿಂಗಳೆರೆಯುತಿರುವಂತೆ
ಚಿತ್ತ ಭಾವದ ಕಣ್ಗೆ ದರ್ಶನವನೊದವಿಸುತ
ಲೋಪವೆಸಗುವನಿತರ ಚಿಂತೆಗಳ ಸಂತೆ

ಮುಡಿಯಲ್ಲಿ ಮಲರಿರುವ ಸಳಿತೋಳ ಶಾಖೆಗಳ
ಕೇಸುಗುರ ಬೆರಲುಗಳ ತಳಿರನಾಂತೆಸೆವ
ನಡೆಯುವೆಳವಳ್ಳಿಯೊಂದತ್ತಿತ್ತ ಮೆಲ್ಮಿಂಚ
ಹರಹುತ್ತ ಸಂಚಾರವೆಸಗುವಂತಿರುವ
ನನ್ನಾಕೆಯೆನ್ನ ಜೀವನತರುವನಪ್ಪಿರಲು
ಸಂತಸದ ಸುಮಗಳಿಗೆ ಬರಗಾಲವಿಹುದೇ ?
ಬನ್ನಗಳ ಕತ್ತಲೆಯು ಮೊತ್ತಗಳ ಕೆಡುಸೆನಪು
ನೇಸರಿದಿರಿನ ಮಂಜುವನಿಯಾಗದಿಹುದೇ ?

ಅವಳ ಚೆಲುಗೆನ್ನೆಗನ್ನಡಿಯಲ್ಲಿ ನನ್ನ ತುಟಿ
ಯೆಸಳುಗಳ ಪಡಿನೆಳಲ ಕಾಣುತಿರುವಾಗ
ಅವಳ ಮೈಯೊತ್ತಿನಲಿ ಕುಳಿತೆನ್ನ ಹಸ್ತಗಳು
ಹೆಗಲುಗಳ ಬಳಸುತ್ತ ತಬ್ಬುತಿರುವಾಗ
ಅವಳ ಕಂಗಳ ಹೊಳಪು ನನ್ನನಾವರಿಸಿರಲು
ಸೋಂಕಿನಮೃತಾನಂದ ಚಿಮ್ಮುತಿರಲು
ಕಿವಿಗಳಿಗೆ ಇನಿದನಿಯು ಮೆಲ್ಲೊಸೆದು ಬೆಸೆದಿರಲು
ಬೇರೆ ಬ್ರಹ್ಮಾನಂದಕಿಹುದು ಸೋಲು

ತವರುಮನೆಯಲಿ ಮಡದಿ

ಚೊಚ್ಚಲು ಬಸಿರಿನ ಸಂಭ್ರಮದಿಂದ
ಮಡದಿಯು ತವರಿಗೆ ಸಾಗಿಹಳು
ಅಗಲಿಕೆಯುರಿಯಲಿ ಬೇಯುತ ನಾನಿಹೆ
ಕನಸಿನ ಲೋಕದಿ ಕಾಣುವಳು

ಮನೆಯಲಿ ಹೊಸ್ತಿಲು ಮಣಿಯುವರಿಲ್ಲದೆ
ಜೋಲುವ ಮೋರೆಯನಾಂತಿಹುದು
ರಂಗೋಲೆಯ ಕೈಕುಸುರಿನ ಚೆಲುವಿಕೆ-
ಯಿಲ್ಲದೆ ಬಾಗಿಲು ಅಳುತಿಹುದು

ಮದುವೆಯ ಕಾಲದ ನಮ್ಮಿಬ್ಬರ ಪಟ
ದೂಳಿನ ಮುಸುಕನು ತಳೆದಿಹುದು
ಗೋಡೆಗೆ ಮಾಡಿಗೆ ಜೇಡನ ಬಲೆಸುಳಿ
ವೃತ್ತಾಕಾರವನೆಯ್ದಿಹುದು

ರವಿವರ್ಮನ ಕೈಕುಂಚದಿ ಬೆಳಗಿದ
ವೀಣಾಶಾರದೆ ಅದೋ ಅಲ್ಲಿ
ಊದಿದ ಬತ್ತಿಯ ಪರಿಮಳವಿಲ್ಲದೆ
ನವೆವಳು ಮೌನದ ಕಳೆ ಚೆಲ್ಲಿ

ಮಲಗುವ ಮನೆಯಲಿ ಸಿಂಗರವಿಲ್ಲದೆ
ಶೂನ್ಯವು ರಾಜ್ಯವನಾಳುವುದು
ಮುಳ್ಳಿನ ಹಾಸಿಗೆಯಲಿ ಮೈ ಚೆಲ್ಲಿರೆ
ನಿದ್ದೆಯು ಮುನಿಸನು ನಟಿಸುವುದು

ಸತಿ ಬಿಟ್ಟೈದಿದ ಬಣ್ಣದ ಸೀರೆಯು
ಚಿತ್ರಕಸೂತಿಯ ರವಕೆಗಳು
ಕಣ್ಣಿಗೆ ಹಬ್ಬವನೀಯುತಲಿರಲು
ಚಿತ್ತಕೆ ಶಾಂತಿಯನೀಯುವಳು

□ ೧೯೪೬

ನಲ್ಲೆಯ ನೆನಪು

ನಲ್ಲೆ ! ಎಂದೈತರುವೆಯೋ ?
ಬಗೆಗೆ ಸೊಗವನ್ನೀವೆಯೊ ?

ಯಾವ ಕಜ್ಜವ ಗೈಯ ಹೋದರು
ನಿನ್ನ ನೆನಪೇ ಸುಳಿವುದು
ಅಚ್ಚುಗಟ್ಟಿನೊಳಾವ ಕಾರ್ಯವ-
ನೆಸಗಲಿಚ್ಛೆಯೆ ಬಾರದು

ಪ್ರಕೃತಿರಂಗದೊಳೆಲ್ಲಿ ನೋಡಲು
ನಿನ್ನ ನೆನಪಿದೆ ನಲ್ಲೆಯೆ !
ಆವ ವಸ್ತುವ ಕಾಣ ಹೋದರು
ನಿನ್ನ ಪಡಿನೆಳಲಲ್ಲಿಯೆ

ಸಂಜೆಗೆಂಪನು ನೋಡಿ ಮನವನು
ಬಿನದಗೊಳಲಿಚ್ಛಿಸಿದರೂ
ನಿನ್ನ ಚೆಂದುಟಿಗೆಂಪಿನ ಸ್ಮೃತಿ
ಬಂದು ಚಿತ್ತವ ಕವಿವುದು

ನೇಸರಿನ ಎಳೆಬಿಸಿಲಿನಂತೆಯೆ
ಚಂದಿರನ ಬೆಳ್ದಿಂಗಳ
ನೋಡು ನೋಡುತ ನೆನಪು ನಲಿವುದು
ನಿನ್ನ ನಗುಮಲ್ಲಿಗೆಗಳ

ಮಾಮರದ ಮರೆಯಲ್ಲಿ ಕುಕಿಲುವ
ಕೋಗಿಲೆಗಳಿನಿದನಿಯನು
ಆಲಿಸುತ್ತಿರೆ ನಿನ್ನ ಮಧುರಾ-
ಲಾಪವನು ನಾ ನೆನೆವೆನು

ಬಳ್ಳಿಯಲಿ ಮಲರಿರುವ ಹೂಗಳ
ಚೆಲುವಿಕೆಯು ದಿಟ್ಟಿಸುತಿರೆ
ನಿನ್ನ ನಗೆಗಣ್ಣುಗಳು ಬಗೆಯಿದಿ-
ರಲ್ಲಿ ಕುಣಿವಂತೆನಿಪುದು

ಕತ್ತಲೆಯ ಕಾಳಿಮೆಯು ನಿಟ್ಟಿಸೆ
ನಿನ್ನ ಸುಳಿಗುರುಳೋಳಿಯ
ಕಾಷ್ಣ್ಯ ಕಣ್ಣಿಗೆ ಕಟ್ಟಿದಂತೆಯೆ
ನಲ್ಲೆ ! ಸವಿನೆನಪೆಸೆವುದು

ನಲ್ಲೆ ! ಎಂದೈತರುವೆಯೋ ?
ಬಗೆಗೆ ಸೊಗವನ್ನೀವೆಯೋ ?

□ ೧೯೪೪

ಇಂದು ಬರುವಳು ನನ್ನ ಮನದನ್ನೆ–

ಇಂದು ಬರುವಳು ನನ್ನ ಮನದನ್ನೆ ಮಾನಸಕೆ
ಸಂತೋಷ–ಸಂಭ್ರಮೋತ್ಸಾಹ ಸುರಿಸಿ
ಒಂದು ತಿಂಗಳಗಾಧ ವಿರಹ ಸಾಗರವನ್ನು
ದಾಟಿಪಳು ಸಗ್ಗದೀವಿಯನೊದವಿಸಿ

ಎಲ್ಲಿ ನೋಡಿದರಲ್ಲಿ ನಲವಿನೈಸಿರಿಯೇರಿ
ಒಲವಿನೊಸಗೆಯ ಕುಣಿತ ಕಣ್ಣಮುಂದೆ–
ಉದಯ ಭಾಸ್ಕರನಿಂದು ರಾಗರಕ್ತತೆಯಿಂದ
ಪ್ರೇಮಪೂಜಕನಾಗಿ ತೋರುತಿಹನು

ವಿಹಗ ಸಂಕುಲದುಲಿತ ಸುಪ್ರೀತಿ ಸಂಗೀತ
ರಾಗರಸ ಮಧುನಾದವಾಗಿರುವುದು
ಕಣ್ಣೆದಿರ ಪೈರ ಬೆಳೆ ಹಸುರು ಹೊಳೆ ಹರಿವಂತೆ
ಒಲುಮೆಯಲೆಯೊಲೆವಂತೆ ಭಾಸವಿಹುದು

ಹಗಲುಗಳ ಜಕ್ಕವಕ್ಕಿಗಳಂತೆ ನಾವಿಬ್ಬ-
ರೆಡೆವಿಡದೆ ಸಂತತಂ ಸೇರುವೆಯನು
ಪಡೆದಿರಲು ಬೇಕೆಂದು ಒಡನಾಟವಿರಲೆಂದು
ಸ್ವಾರ್ಥ ದೃಷ್ಟಿಯ ಚಿತ್ತ ಚಿಂತಿಸಿದರೂ–

ಆಗೊಮ್ಮೆ ಈಗೊಮ್ಮೆ ತಾಯಮನೆ–ತವರುಮನೆ
ಯೆಂದು ಹೋಗಲು ಬರಲು ನಲ್ಲೆಗಿಹುದು
ಎಳೆತನದಿ ಸಾಕಿರುವ ತಂದೆತಾಯ್ವಿರ ಮಮತೆ
ಬಂದು ಮಡದಿಯ ಕರೆದುಕೊಂಡೊಯ್ವುದು

ಆಗವಳ ನಗುಮೊಗದ ಬೆಳಗು ಕದಪಿನ ಮೆರುಗು
ಸವಿದುಟಿಗಳಿಂಪು-ಬೆಳ್ಗಿಂಪು-ಸೊಂಪು
ಮನಸೆಳೆವ ನೀಳ್ಗಣ್ಣುಗಳ ಕಾಂತಿ-ಚಂಚಲತೆ
ಮುಂಗುರುಳುಗಳ ಕೊಂಕು-ಸುಳಿಯು-ಕಂಪು–

ಕೆಲವು ದಿನಗಳವರೆಗೆ ನನ್ನಿಂ ವಿಯೋಗವನು
ಹೊಂದಿ ಸಹ್ಯಾಸಾಧ್ಯತೆಯು ಪಡೆವುವು
ಆದರೂ ಮನವು ಮೌನದೊಳಿರದೆ ಭಾವನೆಯು
ಭಿತ್ತಿಯಲಿ ನಲ್ಲೆಯಂಕಿತ ಗುರುತಿಸಿ–

ಕಾಲವನು ತಳ್ಳಿ ಇಂದಿನ ತೆರದ ದಿನವನು
ಕಾಂಬ ಸೈಪಿನ ಸುಕೃತವನುಭವಿಪುದು
ಎಂದಿಗಿಂತಲು ಇಂದು ಸಂತೋಷದಾಧಿಕ್ಯ-
ವದರಿಂದ ವಿರಹದಲಿ ಲಾಭವಿಹುದು

ಇಂದೋಪಳೈತಂದು ಪ್ರೇಮ ಪ್ರವಾಹದಲಿ
ಆನಂದ ಜಲದಿಂದ ಮೀಯಿಸುವಳು
ತೋಳುಗಳ ಹೂಸರಗಳಿಂದೆನ್ನ ಸೆರೆವಿಡಿದು
ಸವಿಮುತ್ತುಗಳ ಮಾಲೆ ತೊಡಿಸಲಿಹಳು

☐ ೧೯೪೬

ಕೋಪವೇತಕೆ ಮಾನಿನಿ ?

ಕೋಪವೇತಕೆ ಮಾನಿನಿ ?
ಹುಸಿಮುನಿಸ ನನ್ನಲಿ ನೀಗು ನೀ

ಜೀವನವೆಂಬುದು ಜೀವನ ಕೈಲಿಲ್ಲ
ನಶ್ವರವಾಗಿದೆ ವಿಶ್ವದಲಿ
ಇಂದೋ ನಾಳೆಯೊ ಎಂಬುದು ತಿಳಿದಿಲ್ಲ
ಬಾಳ್‌ಗುಳ್ಳೆ ಸಿಡಿವುದು ದಿಟವಿಲ್ಲಿ

ಹೀಗಿರಲೇಕಾಗಿ ನಮ್ಮಿಬ್ಬರ‌ದೆಯಿದು
ಏಕತೆಯನು ಬಿಟ್ಟು ದೂರ-ದೂರ ?
ಸಿಟ್ಟಿನ ಸಾಗರ ಹಟದ ಸಮೀರನ
ತೀಟದಿ ಚಿಮ್ಮುತಲಿದೆ ಬೇಸರ

ಹಿಂದಿಲ್ಲ-ಮುಂದಿಲ್ಲ ನಡುವಿನ ಜೀವನ
ಶೂನ್ಯಾಕಾಶದ ತಾರೆಯಿದೆ
ಮೋಡವು ಮುಸುಕಿ ಮುಗಿವುದಕಿಂತ ಮುನ್ನವೆ
ಸೂರೆಗೊಳ್ಳುವ ನಾವು ಸುಖದ ಸುಧೆ

ಜೀವನವೆಂಬುದು ಹೆಚ್ಚಿಲ್ಲ ಬಾನಿನ
ಕಾಮನ ಬಿಲ್ಲಿನ ಹೋಲುವೆಯು
ಹರೆಯ ಬಣ್ಣಗಳೆಂದು ವೈವರ್ಣ್ಯವಪ್ಪುವೊ
ಸಾಕೀ ಸಿಟ್ಟಿನ ವಿರಸತೆಯು

ಹಲ್ಲುಗಳಿದ್ದಾಗ ಹುರಿಗಡಲೆಯು ನಿಜ
ಮತ್ತೆಲ್ಲಿ ಸಂತೋಷ ಮುದಿತನದಿ
ಇಂದಿನ ಹಾಲನ್ನವನು ನಾವು ಬಿಟ್ಟರೆ
ನೈರಾಶ್ಯ ವಡಸದೆ ಜೀವನದಿ ?

ಇನ್ನೇಕೆ ಹುಬ್ಬಿನ ಬಳ್ಳಿಯೊಳಾ ಕೊಂಕು ?
ಕಣ್ಣಿನ ಕಡೆಯಲಿ ಕಡುಗೆಂಪು ?
ತುಟಿಯದುರುವುದೇಕೆ ? ಮೂಗರಳುವುದೇಕೆ ?
ಮೂಡಿ ಬರಲಿ ಬಿಳಿನಗೆಯಿಂಪು

ಇಂದಿನ ದಿನ ನಮ್ಮದಾಗಿರೆ ನಾಳೆಯ
ಯೋಚನೆಯೇತಕೆ ? ಬರಿಕನಸು
ಬಾಳಿನ ಬಳ್ಳಿಯ ಬಿಳಿಹೂವೆ ! ಬಾ ಬಾರೆ
ಜೀವನವಾಗಲಿ ದಿಟ ನನಸು

☐ ೧೯೪೮

ಸುಖವಿಲ್ಲ

(ಹೆಂಡತಿಯ ಮಾತು)

ನಿಮ್ಮ ಕೈಯನು ಹಿಡಿದು ಮೂರು ಸುಗ್ಗಿಯು ಮಾಗಿ
ನಾಲ್ಕನೆಯದಿದು ತಲೆಯ ಹೊರಹಾಕಿತಲ್ಲಾ ?
ಚಕ್ರನೇಮಿಕ್ರಮದಿ ಹಗಲಿರುಳು ತಿರುತಿರುಗಿ
ಮಾಸ-ವರ್ಷಗಳಲ್ಲಿ ಪರಿಣಮಿಪುದಲ್ಲಾ ?

ಆಚೆ ಮನೆ ಕಸ್ತೂರಿ ನೆರೆಮನೆಯ ಸಿಂಗಾರಿ
ಓಣಮನೆಯಾ ಶಾರಿ ಬೀದಿ ಮನೆ ಗೌರಿ
ಈಚೆ ಮನೆಯಾ ಗಂಗೆ ಮಗ್ಗುಲಲ್ಲಿಹ ತುಂಗೆ
ದೊಡ್ಡಮನೆ ಕಾವೇರಿ ಗುಡ್ಡೆ ಮನೆ ನಾರಿ

ಇವರೆಲ್ಲ ತಂತಮ್ಮ ಗಂಡಂದಿರೊಡನೊರೆದು
ಹೂಸೀರೆ ಜರಿಸೀರೆ ರವಕೆಗಳನು
ಉಟ್ಟಿಹರು ತೊಟ್ಟಿಹರು ಕೈಗಳಲಿ ಕತ್ತಿನಲಿ
ಬಗೆಬಗೆಯ ಬಂಗಾರ ತೊಡವುಗಳನು

ಕಪ್ಪು ಸೀರೆಯನುಡುವುದೇ ನನ್ನ ಹಣೆಬರಹ
ಬೇರೆ ಬಣ್ಣದ ಸೀರೆ ತಂದರೇನು?
ತೆಳುವಾದ ಬಿಳಿಸೀರೆ ಚಿತ್ರದಂಚಿನ ಸೀರೆ
ಕನಸಿನಲ್ಲುಡುವುದೇ ನನ್ನ ವಿಧಿಯೇನು ?

ತಂದೆ ಮಾಡಿಸಿಕೊಟ್ಟ ಚಿನ್ನದಾಭರಣಗಳು
ಒಂದೆರಡೆ ಅಂದಿನಿಂದಿಂದುವರೆಗೆ
ನನಗಾಗಿ ತೂಕವೊಂದಾದರೂ ಚಿನ್ನವನು
ಕರಗಿಸಲದೇಂ ಮನವು ಬಂತೆ ನಿಮಗೆ ?

'ಯುದ್ಧ ದುರ್ದಿನದಿಂದ ಪವನಿಗೇರಿತು ಬೆಲೆಯು
ಕಡಿಮೆಯಾಗಲಿ ಮಾಡಿಸುವೆ; ಚಿಂತೆಯೇಕೆ ?
ಹೊನ್ನ ತಗಡನು ಮಾಡಿ ನಿನ್ನ ಮುಚ್ಚಿಪೆ'ನೆಂದು
ಲಲ್ಲೆಯಾಡುತಲಿರುವುದಿಷ್ಟೇನು ಸಾಕೇ ?

ತಲೆಗೆ ಪರಿಮಳದೆಣ್ಣೆ ಕೇಶವರ್ಧಿನಿ ತೈಲ
ಮೊಗಕೆ ಸೌಸವವೀಯುತಿಹ ಬಿಳಿಯ ಹುಡಿಯು
ತಲೆಕೂದಲೋರಣದಿ ನಿಲ್ಲುವಂತಿಹ ಕ್ಲಿಪ್ಪು
ಹೆಣೆಜಡೆಯ ತುದಿನೆಯ್ಯಲಿಹ ರೇಶ್ಮೆ ಕುಡಿಯು

ಬಣ್ಣನೂಲಿನ ಚಿತ್ರ ಬಿಡಿಸಿರುವ ಕರವಸ್ತ್ರ
ಕೈಗಳಿಗೆ ಹೊಸ ಬಗೆಯ ಗಾಜುಬಳೆಯು
ಈ ವಿಲಾಸದ ವಸ್ತುಗಳ ತನ್ನಿರೆಂದೆನಲು
ನಿಮ್ಮ ಮುಖಮುದ್ರೆಯಲಿ ಮೌನ ಕಳೆಯು

ಯಾವಾಗ ನೋಡಿದರು ಪುಸ್ತಕಗಳೊಡನಾಟ
ಓದುವುದು ಬರೆಯುವುದು—ಆಯಾಸವಿಲ್ಲ
ಹಗಲಿಡೀ ನಿಮಗಾಯ್ತು ಪಾಠಶಾಲೆಯ ಕೂಟ
ನನ್ನೊಡನೆ ಸಲ್ಲಾಪ–ಸರಸೋಕ್ತಿಯಿಲ್ಲ

ಸಾಕು ನಿಮ್ಮಯ ಪ್ರೀತಿ ಬರಿಯ ಬಾಯುಪಚಾರ
ತನ್ನ ಕಾರ್ಯಕೆ ಮಾತ್ರ ನನ್ನನಿಚ್ಛಿಪುದೇ ?
ನಿಮ್ಮಿಂದಲೊಂದಿಷ್ಟು ಸುಖ ಹೊಂದಲೆನಗಿಲ್ಲ
ಬರಿಗುಲ್ಲು ಕಡು ನಿದ್ದೆಗೇಡೆಂಬ ಗಾದೆ

□ ೧೯೫೦

ಸುಖವುಂಟು

(ಗಂಡನ ಉತ್ತರ)

ಮುಗುದೆ! ಮೋಹನೆ! ನಲ್ಲೆ! ನಿನ್ನ ಮಾತನು ಕೇಳಿ
ನಗುವುಕ್ಕಿ ತುಟಿಮಿಕ್ಕಿ ಬರುತಿರುವುದು
ನಸುಮುನಿಸ ಹೊರಸೂಸಿ ಕೊಂಕು ಹೂನುಡಿ ಚೆಲ್ಲಿ
ಬಿಂಕವೆಸೆವುದಿದೆಷ್ಟೊ ಚೆನ್ನಿರುವುದು

ಬಣ್ಣ ಬೆಡಗಿನ ಜರಿಯು ಸೀರೆಯೇತಕೆ ನಿನಗೆ ?
ಸರಳತೆಯ ಚೆಲುಸೀರೆ ಸಾಲದೇನು?
ಆ ಶಕುಂತಲೆ ನಾರ ಬಟ್ಟೆಯನುಟ್ಟಿರಲು
ದುಷ್ಯಂತನಿಗೆ ಚೆಲುವನೀಯಳೇನು ?

ಹೊನ್ನ ಭೂಷಣವೇಕೆ ? ಲೋಹ ಹೊರೆಯಲ್ಲವೇ ?
ಆಭರಣವಿಲ್ಲದಿರೆ ಚೆಲುವು ಕುಂದೇ ?
ಸೀತೆ–ಪಾಂಚಾಲೆಯರಿಗಿದ್ದುವೇ ತೊಡವುಗಳು
ಕಾಡಿನಲೆದಾಟದಲಿ ? ಪತಿಯ ಜೊತೆಯೊಂದೇ

ಕುಸುಮಗಳ ಸೌಸವವು ಚೆಲುವಿಸಲಿ ವಿವಿಧತೆಯು
ಮಾರ್ದವವು ಹೊಂದೊಡವುಗಳಿಗಿರುವುದಿಲ್ಲ
ಕೃತ್ರಿಮತೆಯಲಿ ಚೆಲುವನಾನುವುದು ತರವಲ್ಲ
ನೈಜತೆಯ ಸೌಂದರ್ಯ ಸಾಕು ನಮಗೆಲ್ಲ

ಬಾಹ್ಯ ವಸ್ತುಗಳಲ್ಲಿ ಸುಖ ಹುದುಗಿಕೊಂಡಿಲ್ಲ
ಮನದ ಮರೆಯಲಿ ಮನೆಯ ಮಾಡಿರುವುದು
ಆಸೆಮುಗಿಲುಗಳೋಳಿ ತಿಳಿವುಗಾಳಿಗೆ ಚೆದರೆ
ತೃಪ್ತಿನಭದಲಿ ಸೊಗದ ನೇಸರೆಸೆಯುವುದು

ಕವಿತೆಗಳ ಗಂಧರ್ವ ಲೋಕದ ವಿಹಾರದಲಿ
ಕಥೆ ವಾಚನದ ಕಿನ್ನರರ ಕೂಟದಲ್ಲಿ
ನಾಟಕಂಗಳ ನಾಕದಪ್ಸರೆಯ ನಾಟ್ಯದಲಿ
ಸುಖವುಂಟು ಮನದನ್ನೆ! ಭಾವಲಹರಿಯಲಿ

ಮುಗುದೆ

ನನ್ನೀ ಹೆಣ್ಣನು ಬಣ್ಣಿಪೆನೆಂತು ?
ನಾಚಿಕೆಯಿವಳಿಗೆ ಸಿಂಗಾರ
ಕಡೆಗಣ್ಣೋಟದ ಕೊಂಕೇ ಬಿಂಕ
ಮೌನದ ಮೋಡಿಯೆ ವಯ್ಯಾರ

ಹಿರಿಯರ ಇದಿರಿಗೆ ಹೆಸರೆತ್ತಿದರೆ
ಮೊಗವನು ಕೆಳಗಿಸಿ ನೋಡುವಳು
ಏನನ್ನಾದರು ಪ್ರಶ್ನಿಸಿ ನುಡಿದರೆ
ಉಂಗುಟದಲಿ ನೆಲ ಗೀರುವಳು

ಏಕಾಂತದಿ ಮೊಗ ಮೇಲೆತ್ತಿದರೆ
ಮೋರೆಯನಾಚೆಗೆ ತಿರುಗಿಪಳು
ಕೈಹಿಡಿದೀಚೆಗೆ ಮೆತ್ತಗೆ ಸೆಳೆದರೆ
ಕೆನ್ನೆಯ ಕಿತ್ತಳೆಯಾಗಿಪಳು

ಹೊಸ ಹರೆಯದ ಬಲು ಚೆಲುವೆಯು ಬಾಲೆ
ಮುದ್ದಿನ ಮುಗುದೆಯು ಮೋಹನೆಯು
ನನ್ನೀ ಬಾಳಿಗೆ ಸಂತಸದೊಸಗೆಯು
ಸೌಭಾಗ್ಯದ ಜಲ ಸೇಚನೆಯು

□ ೧೯೫೧

ಬಾ ಗೆಳತಿ !

ತಿಂಗಳ ಬೆಳಕಿಗೆ ಬಾ ಗೆಳತೀ !
ತಂಗದಿರನ ಕಾಣ್ ಬಗೆಯೊಡತಿ !

ಅಂಗಳದಲ್ಲಿಹ ದಿನ್ನೆಯ ಮೇಲಿಗೆ
ಹೂವಿನ ಚಿಗುರಿನ ಮೆಲ್ಹಾಸು
ಹಾಸಿದೆ ನಮ್ಮನು ನಲುಮೆಯ ಕರೆಯಲಿ
ಸ್ವಾಗತಿಸುತ್ತಿದೆ ಕುಳ್ಳಿರಲು

ಬೆಳದಿಂಗಳ ಸಿರಿ ಸಿಂಗರವಾಗಿದೆ
ಹಾಲಿನ ಹೊಳೆ ಹರಿದಂತಿಹುದು
ಮಲ್ಲಿಗೆ ಬೆಳ್ಳಗೆ ಚೆಲ್ಲಿವ ತೆರದಲಿ
ಬೆಳಕಿನ ಹುಚ್ಚನು ತಳೆದಿಹುದು

ಆಗಸದಲಿ ಬಿಳಿಮುಗಿಲುಗಳೋಳಿಯು
ಹಿಂಜಿದ ಹತ್ತಿಯ ಹರಡಿಹುದು
ಹುಣ್ಣಿಮೆ ಚಂದ್ರನ ತುಂಬಿದ ಬಿಂಬವು
ಕಣ್ಣಿಗೆ ಹಬ್ಬವನೀಯುವುದು

ಶೋಭಾರಾಶಿಯು ಚೆಲ್ಲಿದೆ ನಲ್ಲೆಯೆ !
ಸಂತಸವುಣ್ಣಲು ಬಾ ಬಾರೆ
ಪ್ರಕೃತಿಯು ಬೀರಿದ ಚೆಲುವಿನ ಸಂತೆಯ
ಕೊಳ್ಳುವ ಬೇಗನೆ ಬಾ ನೀರೆ !

ಮರಗಳ ಶಾಖೆಯು ಬಳುಕಿದ ಬಳ್ಳಿಯ
ತಬ್ಬುತ ಪಿಸು ಮಾತಾಡುತಿದೆ
ಭೂಮಿಯು ಚಂದಿರನಿತ್ತಿಹ ಮುತ್ತಿಗೆ
ಪುಲಕಿಸಿ ಬೆಳುನಗೆ ಬೀರುತಿದೆ

ತಿಂಗಳ ಬೆಳಕಿಗೆ ಬಾ ಗೆಳತೀ !
ತಂಗದಿರಸ ಕಾಣ್ ಬಗೆಯೊಡತಿ !

☐ ೧೯೪೬

ನಲ್ಲೆಯ ನಗುಮೊಗ

ನಲ್ಲೆಯ ನಗುಮೊಗ ಬಳಿಯಲ್ಲಿದ್ದರೆ
ಮನೆಯೆಲ್ಲಾ ಬೆಳಗು
ಮನೆಯಲ್ಲಿರದಿರೆ ಭಣ ಭಣ ಶೂನ್ಯವು
ಮನವೆಲ್ಲಾ ಕೊರಗು

ಆಕೆಯ ನಗೆಯೇ ಸೋತಿಹ ಜೀವಕೆ
ಸವಿ ಸಂಜೀವನವು
ಬರಿದಾಗಿಹ ಬಗೆ ಭಾವನೆಗಳಿಗೆ
ಅಮೃತದ ಸೇವನವು

ಬೆಳ್ಳಗೆ ನಗೆಯಿರೆ ಬೆಳುದಿಂಗಳ ತೊರೆ
ಹರಿದಂತೆನಿಸುವುದು
ಬಿಮ್ಮಗೆ ಮೌನದಿ ಮುನಿಸನ್ನಾಂತರೆ
ಕತ್ತಲೆಯೊದಗುವುದು

ಎಂದೆಂದೂ ಬೆಳುನಗುಮೊಗವಿದ್ದರೆ
ಬಾಳ್ವೆಯು ಮಧುಮಾಸ
ನಲ್ಲೆಯ ಮಧುರ ಪ್ರಸನ್ನತೆಯೆಂದರೆ
ಶೃಂಗಾರದ ಹಾಸ

☐ ೧೯೫೧

ಸಂಜೆ ಕಡಲು ಕರೆಯಲ್ಲಿ ನಲ್ಲೆಯೊಡನೆ

ಕಡಲಿನ ಕರೆಯಲಿ ನಿಂತಿಹೆವು
ಸಂಜೆಯು ಕಳೆಯುವೆವು
ಗಾಳಿಯ ಮಡಿಲಿನೊಳಾಡುವೆವು
ತೆರೆಗಳ ಡೂಕ ನೋಡುವೆವು
ಹೊಯಿಗೆಯ ಹಾಸಿಗೆ ಹರಡಿದೆ ಬೆಳ್ಳಗೆ
ಕುಳ್ಳಿರೆ ಕರೆವುದು ಬೈಗಿಂಗೆ

ಜಲಧಿಯ ಗೀತವು ಮೊರೆಯುತಿದೆ
ತೆರೆ ಸರ ಕೆಲೆಯುತಿದೆ
ಅಲೆಗಳ ಹೊಡೆತವು ಕಿವಿದೆರೆಗೆ
ಕೇಳಿಪುದಡಿಗಡಿಗೆ
ಕಡಲಿನ ತಂಪು ಗಾಳಿಯೊಳಿಂಪು
ಮನಸಿಗೆ ಬೆಸೆವುದು ಸವಿಸೊಂಪು

ಕಂತುವ ಸೂರ್ಯನು ಸೂಸುವನು
ಕಿತ್ತಳೆ ಬಣ್ಣವನು
ಕಿರಣದ ಮೊನೆಯಲಿ ಮಿನುಗುವನು
ನೀರಿನೊಳೆಸೆಯುವನು
ಪಡುವಣ ಬಾನು ಮುಗಿಲಿನ ಸಾನು
ಕರೆವುದು ಕೆಂಪಿನ ಸೋನೆಯನು

ಹತ್ತಿರ ನಲ್ಲೆಯು ನಗುತಿಹಳು
ಒತ್ತಿಗೆ ನಿಂತಿಹಳು
ಹೆಗಲನು ತಬ್ಬುತ ಹಿಡಿದಿಹಳು
ನಲಿವುದು ಮುಂಗುರುಳು
ಹೂನಗು ಚೆಲ್ಲಿ ಸಂತಸವಲ್ಲಿ
ಇಬ್ಬರು ನಿಂತೆವು ಮೌನದಲಿ
ಚೆಲುವಿನೊಳೈಕ್ಯವನಾಸುತಲಿ

□ ೧೯೪೮

ಪ್ರಿಯದರ್ಶಿನಿ !

ಪ್ರಿಯದರ್ಶಿನಿ ! ಮನಮೋಹಿನಿ !
ಹಂಸಾಲಸ ಯಾನೇ !
ಕಲಭಾಷಿಣಿ ! ವರವರ್ಣಿನಿ !
ಚಂದ್ರೋಜ್ವಲ ವದನೇ !

ಗೌರಸ್ಮಿತೆ ! ಸೌರಭಯುತೆ !
ಭೃಂಗಾಸಿತ ಚಿಕುರೇ !
ಪಿಕಭಾಷಿತೆ ! ಸುಮಭೂಷಿತೆ !
ಬಿಂಬಾಧರ ಮಧುರೆ !

ಕುಂದೋಜ್ವಲ ರದನಾನ್ವಿತೆ !
ನಳಿನಾಯತ ನೇತ್ರೇ !
ಚಿತ್ರಾಂಬರ ಸಂಶೋಭಿತೆ
ಚಾರುಲತಾ ಗಾತ್ರೇ !

ಇಂತೋರ್ವನು ಪ್ರಿಯ ರಸಿಕನು
ತನ್ನೋಪಳ ಪೊಗಳೆ
ಕಣ್ಣರಳಿತು ನಗುವೊಲಿಯಿತು
ಮುನಿಸೋಡಿತು ಪ್ರಿಯೆಗೆ

ನಸುಮುನಿಸಿನ ಪ್ರಣಯಾನ್ವಿತೆ
ಲಜ್ಜಾತುರೆ ಮುಗ್ಧೆ
ಒಯ್ಯಾರದಿ ಪಿಸುನುಡಿಯುತೆ
ಒಲಿದಳು ಸುಸ್ನಿಗ್ಧೆ

☐ ೧೯೫೨

ಉಯ್ಯಾಲೆಯಾಡೋಣ !

ಉಯ್ಯಾಲೆಯಾಡೋಣವೇ ? ಬಾರಲೆ ನಲ್ಲೆ !
ಉಯ್ಯಾಲೆಯಾಡೋಣವೇ ?

ಅಂಗಳದ ತುದಿಯಲ್ಲಿ ಮಾಮರದ ರೆಂಬೆಯಲಿ
ಜೋತಾಡುವುಯ್ಯಾಲೆಯದೊ ಕರೆಯುತಿಹುದು
ನಿನ್ನ ಜೊತೆಯಿಲ್ಲದಿರಲದಕೆ ಬೇಸರವಂತೆ
ಇನ್ನೇಕೆ ತಡ ? ಬಾರೆ ! ಹೋಗೋಣ ಕಾಂತೆ !

ಸಂಜೆಯಾ ಹೊಂಬಿಸಿಲು ಎಲೆಗಳಲಿ ನಲಿಯುತಿದೆ
ತಂಗಾಳಿ ಸವಿಯಾಗಿ ತೀಡಿ ಒಲಿಯುತಿದೆ
ಪಕ್ಷಿಗಳ ಕಲರವದ ಸಂಗೀತವಾಗುತಿದೆ
ನೀ ಬಾರದಿರಲೀಗ ಎಲ್ಲ ವ್ಯರ್ಥವಿದೆ

ಕಾದಂಬರೀ ಪಠನವಿದೆಯೆಂದು ಹೇಳುವೆಯ ?
ರಾತ್ರಿಯೋದಲುಬಹುದು ಪುಸ್ತಕವ ಮುಚ್ಚು
ರವಕೆಯಂಚಿನ ಮೇಲೆ ಬಣ್ಣನೂಲಿನ ಲೀಲೆ
ಚಿತ್ರ ಶಿಲ್ಪದ ಹೆಣಿತ ಬಿಟ್ಟುಬಿಡು ಸಾಕು

ಹಿಂದು ಮುಂದಿನ ದುಃಖವನು ಮರವೆಕಡಲಿನಲಿ
ತೇಲಿಸುತ ರಸನಿಮಿಷ ಸವಿಯೋಣ ಬಾ
ಪ್ರೇಮವೊಂದೇ ಧರ್ಮ ಸಂತೋಷವೇ ಮರ್ಮ
ಚಿಂತೆಯನು ನೆನೆಯದಿರು ನಲಿಯೋಣ ಬಾ

ಉಯ್ಯಾಲೆಯಾಡೋಣವೇ ? ಬಾರೆಲೆ ನಲ್ಲೆ !
ಉಯ್ಯಾಲೆಯಾಡೋಣವೇ ?

□ ೧೯೫೨

ರೋಗಿಯಾದ ಮಡದಿ

ಮರುಗದಿರು ಮನದನ್ನೆ!
ಸ್ವಸ್ಥಳಹೆ ಚಿನ್ನೆ!

ಬಾಳಿನಾಗಸವೊಮ್ಮೆ ಶುಭ್ರವಿರಬಹುದು
ಮಗುದೊಮ್ಮೆ ನರಳಿಕೆಯ ಕಾರ್ಮೋಡ ಬಹುದು
ಎರಡನೊಂದೇ ರೀತಿ ತಿಳಿವ ಸಮಚಿತ್ತ
ಸಂಸಾರದಲಿ ತುಂಬಬೇಕಾದ ತತ್ವ

ತನ್ನ ಪತಿದೇವನಿಗೆ ತನ್ನ ಮಕ್ಕಳಿಗೆ
ಹೊತ್ತುಹೊತ್ತಿಗೆ ಊಟ ತಿಂಡಿಯಿಲ್ಲೆಂದು
ಅವರ ಸೇವೆಯ ಮಾಡಲಾರದಿಹೆನೆಂದು
ಬರಿದೇಕೆ ಕೊರಗುತಿಹೆ ? ಬೇಡವಾ ಚಿಂತೆ

ಆರೋಗ್ಯ ಭಾಗ್ಯ ನಿನಗೊದಗಿ ಬರಲೆಂದು
ತುಂಬು ಬಗೆಯಲಿ ಹರಕೆಯೀಯುತಿಹೆನೆಂದು
ನಿನ್ನ ಮನದಾಳದಾ ನಲ್ಮೆಯರಿವಿಹುದು
ನಿನ್ನ ಆರೈಕೆಯಲಿ ಸಲ್ಲಿಸುವೆನದನು

ನಮ್ಮ ದಾಂಪತ್ಯದಲಿ ಕತ್ತಲೆಯು ತೊಲಗಿ
ಸವಿಸೊಗದ ಬಾಳ್ವೆಳಗು ಬೇಗನೇ ಬೆಳಗಿ
ಬರಲಿರುವುದೆನ್ನುವಾಶಾವಾದವೆಮಗೆ
ದಾರಿ ತೋರಲಿ ಮುಂದೆ ಧ್ರುವ ತಾರೆಯಾಗೆ

ಮರುಗದಿರು ಮನದನ್ನೆ!
ಸ್ವಸ್ಥಳಹೆ ಚಿನ್ನೆ!

□ ೧೯೫೪

ನಲುಮೆಯು ನಲ್ಲ !

ನಲುಮೆಯ ನಲ್ಲನೆ! ಪ್ರೇಮದ ಬೆಳೆಯನು
ಬಾಳಿನ ಬಯಲಲಿ ಬೆಳೆಯೋಣ !
ನೋವಿನ ವಿಷವನು ಹರುಷದ ಸುಧೆಯಲಿ
ತೇಲಿಸಿ ಮುಳುಗಿಸಿ ಮೆರೆಯೋಣ

ಒಲವಿನ ಹಾಲಿನ ಹೊಳೆಯಲಿ ಮಿಂಯುವ
ಸಂತಸ ಕೆರೆಗಳಲೀಜೋಣ
ಗೆಲುವಿನ ನಂದನವನದೊಳಗಾಡುವ
ಬೆಳಕಿನ ಸಗ್ಗದಿ ಕುಣಿಯೋಣ

ಹೂವಿಂ ಹೂವಿಗೆ ಹಾರುವ ಬಣ್ಣದ
ಚಿಟ್ಟೆಗಳಂದದಿ ನಲಿಯೋಣ
ಹುರುಪಿನ ನಗೆಹೂ ಮೊಗದಲಿ ಚೆಲ್ಲಲಿ
ನಲವಿನ ಜೇನನು ಹೀರೋಣ

ಬಾಳಿನ ಬಳ್ಳಿಗೆ ಬಿಳಿ ಹೂ ಮೂಡಲಿ
ಮೂಡಿದ ಹೂವಿಗೆ ಹಣ್ಣಿರಲಿ
ಹಣ್ಣಿನ ಬೆಳೆಯಲಿ ಭಾವೀ ಜೀವನ
ಧನ್ಯತೆ ಪಡೆಯಲಿ ಹದುಳದಲಿ

ಗೋಳಿನ ಬಾಳಿನ ದುಗುಡದ ಬೀಳು
ಸೋಲನು ಪಡೆಯಲಿ ನಾಶದಲಿ
ಬಾಳುವೆಯೆಲ್ಲಾ ಹಸುರಿನ ಹಂದರ-
ವಾಗಲಿ ಚಿಗುರಲಿ ನಗುತಿರಲಿ

ಬಾಳಿನ ಬೆಳಕೇ ! ಪ್ರೇಮದ ಹೊಳಕೇ !
ನಮ್ಮಿರ್ವರ ಎದೆಯೊಂದಿರಲಿ
ನಲವಿನ ಕಣ್ಣೇ ! ಒಲವಿನ ಹಣ್ಣೇ ?
ಪ್ರೇಮಕೆ ಸಂತತ ಗೆಲವಿರಲಿ !

ದುಃಖ ರಾತ್ರಿ

ದೂರದೂರಿನ ಪಯಣದಿಂದಲಿ
ಬಾರನೇಕೆ ಸಖ ?
ನನ್ನ ಬಾಳಿನ ಸೋವು-ಸಂತಸ
ನೋಳ್ಪುದವನ ಮುಖ
ಬರುವೆ ಖಂಡಿತವೆಂದು ಹೇಳಿದ
ಸೊದೆಯನೂಡುವ ಮಧುರನಾದ
ತುಂಬಿ ಸರದಂತುಲಿಯುತಿರುವುದು
ನನ್ನ ಕಿವಿಯಲಿ
ಈಗಲೂ ಜೊನ್ನವನು ಸುರಿವುದು
ನನ್ನ ಬಗೆಯಲಿ

ಹಾಸುಬಟ್ಟೆಯ ಹೊದೆವ ಪಟ್ಟಿಯ
ತೊಳೆದು ತಂದಿರುವೆ
ತಲೆಯ ದಿಂಬಿಗೆ ನೂಲು ಹೂವಿನ
ಕುಸುರಿ ನೆಯ್ದಿರುವೆ
ಮಲಗುಮಂಚದಿ ಬಿಳಿಯ ಹಾಸಿಗೆ
ಸಿದ್ಧವಾಗಿದೆ ನಲ್ಲ ಬರವಿಗೆ
ಇನ್ನು ಇನ್ನೂ ತಡೆವನೇತಕೊ
ನನ್ನ ನಲ್ಗೆಳೆಯ ?
ಹೊತ್ತು ಮೀರಿತು ಬಾರನೇನೋ
ನನ್ನ ಬಾಳ್ಗೆಳೆಯ ?

ಅವನೆ ಮುಡಿಸಲಿ ನನ್ನ ತುರುಬಿಗೆ
ಎಂಬ ತವಕದಲಿ
ಜಾಜಿ ದಂಡೆಯ ಸೂಡದೇ ಮಡ
ಗಿರುವೆ ನಾನಿಲ್ಲಿ
ಕಪಿಲೆ ಕರೆದಿಹ ನೊರೆಯ ಹಾಲನು

ಬೆಳ್ಳಿ ಲೋಟೆಗೆ ಕಾಸಿ ಎರೆದೆನು
ಬಾಡಿ ಹೋಗುವುದೇನೊ ಹೂವಿನ
ಮಾಲೆ ? ಸಖನಿಲ್ಲ
ಹಳಸಿ ಹುಳಿಯುವುದೇನೊ ಕಾಸಿದ
ಹಾಲು ? ಪ್ರಿಯನಿಲ್ಲ

ತಂತಿಯನು ಬಿಗಿಕಟ್ಟಿ ವೀಣೆಯ
ಸಿದ್ಧವಿಟ್ಟಿರುವೆ
ಬೇಟ-ಕೂಟದ ಪ್ರಣಯ ಗೀತವ
ಕಟ್ಟಿ ಕಾದಿರುವೆ
ಎಲ್ಲವೂ ಬರಿದಪ್ಪುದೇನೊ ?
ಮಳಲಿಗೆರೆದಿಹ ನೀರೊ ಏನೊ ?
ಊದುಬತ್ತಿಯ ಹೊಗೆಯು ಪರಿಮಳ-
ವೀಯೆ ಕಾದಿಹುದು
ಹೂವಿನೆಣ್ಣೆಯು ನಲ್ಲನಪ್ಪಿಗೆ
ಸಿದ್ಧವಾಗಿಹುದು

ತೋಳ ತಳ್ಕೆಯ ತೆರಪು ಕಾದಿದೆ
ನಲ್ಲನಪ್ಪುಗೆಗೆ
ಮಿರುಗು ಕೆನ್ನೆಯು ನುಣುಪುಗೊಂಡಿದೆ
ಮುತ್ತಿನೊತ್ತಿಗೆಗೆ
ಕಣ್ಣ ನೀರನು ಕರೆವುದೊಂದೇ
ನನ್ನ ಪಾಲಿಗೆ ಬಂದುದಿಂದೇ
ನಲ್ಲನಿಲ್ಲದೆ ಶೂನ್ಯವಾಗಿದೆ
ನನ್ನ ಹೃದಯವಿದು
ಮೆಲ್ಲಮೆಲ್ಲನೆ ಸಮಯ ಸರಿವುದು
ದುಃಖ ರಾತ್ರಿಯಿದು

□ ೧೯೫೨

ವಿರಹಿಣಿ

ಮೊಗದಲ್ಲಿ ನಗೆಯಿಲ್ಲ
ಕಣ್ಣಲ್ಲಿ ಕಳೆಯಿಲ್ಲ
ಸೊಗದ ಲವಲವಿಕೆಯದು ಹೃದಯದೊಳಗಿಲ್ಲ

ತಲೆಯ ಬೈತಲೆಯಲ್ಲಿ
ಉಟ್ಟಿರುವ ಬಟ್ಟೆಯಲಿ
ಸಲೆಮನವ ಸೆಳೆಯುತಿಹ ಸುವಿಲಾಸವಿಲ್ಲ

ಬಿಸಿಯುಸಿರ ಸುಯ್ಯುವಳು
ಕಂಡಲ್ಲೆ ಕಾಣುವಳು
ಬಸಿವ ಕಂಬನಿಯನ್ನು ನೆರೆತೊಡೆಯುತಿಹಳು

ಆರೇನ ಕೇಳಿದರು
ಮಾತಿಲ್ಲ ಚಿಂತೆಯುರು
ಕಾರಣವನೊರೆಯಳೊಂದಿನಿತಾದರೂ

ಜೀವ ಧಾರಣೆಗೆಂದು
ಆಹಾರವನು ತಿಂದು
ಸಾವ ಸಮಯ ನಿರೀಕ್ಷೆಗೈವ ತೆರವಿಹಳು

ಶೂನ್ಯತೆಯ ರೂಪಾಂತ
ಚೇತನಾತ್ಮಕ ಯಂತ್ರ
ಧ್ಯಾನವನ್ನಭ್ಯಾಸ ಮಾಳ್ಪವೋಲಿಹಳು

ವಿರಹಿಣಿಯು ಇವಳಿಂದು
ಒಲವಿನಾ ಪತಿಯಂದು
ಪರಿಣಯದ ಮರುದಿನವೆ ನಾಡನುಳಿದಿಹನು

□ ೧೯೫೫

ಪ್ರೇಮಾಂಜಲಿ

ಸಂಜೆಯಾಯಿತು ರಾಗವಾಗಸವನಾವರಿಸಿ
ರಂಜಿಸಿದ ತೆರದಲ್ಲಿ ನನ್ನೆದೆಯಲಿ
ಅನುರಾಗವಿಡಿದಿಹುದು ತಿಳಿಯಲಾರೆಯ ನೀನು ?
ಮನವು ತವಕಿಸುತಿಹುದು ಬರಲಾರೆಯ ?

ನಿಮಿಷಗಳು ಗಳಿಗೆಗಳು ಕಾಲನಾಳದೊಳಿಳಿದು
ಸಮವಾಗಿ ಸರಿಯುತಿವೆ ನಿನ್ನ ಸೇರುವೆಯು
ಸಮನಿಸದೆ ಸಮಯವದು ಶೂನ್ಯತೆಯನೀಸುವುದು
ಪ್ರೇಮುಕನಿತಾದರೂ ತಾಳ್ಮೆಯಿದೆಯೇ ?

ಕೆಲವು ಸುಮಗಳ ಕೋಮು ಸರವ ಸುರಿದಿಹೆನಿಂದು
ಗೆಲವಿನೊಲವಿನ ಕಾಣ್ಕೆಯಿದನು ನೀನು
ಕೊಳ್ಳು ಬೇಗನೆ ಬಂದು ಕೊಳ್ಳದಿರಲಾ ಮಾಲೆ
ಕಳೆಗುಂದಿ ಕೊರಕೊರಗಿ ಸೊರಗದೇನು ?

ನಿನ್ನ ಸವಿಗೊಳಲಿನಾ ಗೀತೆಯನ್ನಾಲಿಸಲು
ನನ್ನ ಈ ಕಿವಿಯಿಂದು ತವಕಿಸುವುದು
ನಯನಮೋಹನ ದೇಹ ಶೋಭೆಯನು ದಿಟ್ಟಿಸಲು
ಬಯಸುವುವು ಕಣ್ಣುಗಳು ಬರಲಾರೆಯಾ ?

ಬಗೆಯ ನಲ್ಮೆಯ ನಿಧಿಯೆ ! ನನ್ನ ಬಾಳಿನ ಬೆಳಕೆ !
ಸೊಗದ ಸನ್ಮೂರ್ತಿಯೇ ಬಾರೆಯೇನು ?
ಹೇ ಪವಿತ್ರ ಪ್ರೇಮಮಯನೆ ! ಕರುಣಾಳುವೇ !
ತಾಪವನು ತಿಳಿಯೆಯಾ ಹೆಂಗರುಳಿನ ?

ಹೇ ನಲ್ಲ ! ನೀನಾವ ತಾಣದೊಳಗಿದ್ದರೂ
ನನ್ನೆದೆಯು ನಿನ್ನೆದೆಯೊಳೈಕ್ಯವಾಗಿಹುದು
ಬೇಡುವೆನು–ನಿನ್ನ ವಿಮಲ ಪ್ರೇಮ ನನ್ನಲ್ಲಿ
ಕೂಡಿರಲಿ ! ನಿನಗಿದೋ ಪ್ರೇಮಾಂಜಲಿ !

ಮಗು

ಸತಿ-ಪತಿಯರೆದೆಯೊಲವಿನೊಂದು ತಿಳಿನೀರಿಂದ
ಬೆಳೆದೆರಡು ಬಾಳ್‌ಬಳ್ಳಿಗೊಂದು ಸಿರಿಹೂವು
ಇಬ್ಬರನು ಸಮವಾಗಿ ಸಂಪ್ರೀತಿಗೊಳಿಸುತ್ತ
ತೊಡೆಯುವುದು ಬಾಳ ಜಂಜಡದ ಬಿರುನೋವು

ಕೈಗಳನು ಮುಚ್ಚಿರುವ ಭದ್ರಮುಷ್ಟಿಯು ಬಿಡಿಸೆ
ಕಿರುನಗೆಯು ಮೊಗದಲ್ಲಿ ಕೇವಣಿಪುದು
ನೋವಿನರಿವಿಲ್ಲದೆಯೆ ಕಾಲುಗಳ ಬಡಿವಾಗ
ಹಿಡಿದಿಡಲು ಹೂನಗೆಯು ಹೊಸೆಯಿಸುವುದು

ಹಣೆಯಿಂದ ಮುಂಗುರುಳನತ್ತ ನೇವರಿಸಿವರೆ
ಸುಮ್ಮನೇ ತಲೆಯನಲ್ಲಾಡಿಸುವುದು
ನೋಡಿಯೆತ್ತದೆ ಸರಿಯೆ ಎತ್ತಿಕೋ ಎಂಬಂತೆ
ಬರಿದೆ ಹಟದಲಿ ಚಂಡಿಹಿಡಿದಳುವುದು

ಹೊಳೆವ ಕಣ್ಗಳ ನೋಡಿ ಕೆನ್ನೆಗಳಿಗೊಂದೆರಡು
ಮುತ್ತನಿಟ್ಟರೆ ಮುದ್ದುನಗೆಯ ಬೀರುವುದು
ತಂದೆಯೆತ್ತಿರುವಾಗ್ಗ ತಾಯಿ ಹತ್ತಿರ ಬರಲು
ಅವಳೆಡೆಗೆ ಮೊಗ ಚಾಚಿ ತೋಳುನೀಡುವುದು

□ ೧೯೫೭

ಕಲಾದೇವಿ

ಓ ಕಲಾದೇವಿಯೇ ! ನಿನ್ನ ಸಾಮ್ರಾಜ್ಯದಲಿ
ನೋವು-ಬೇವುಗಳಿಲ್ಲ ದುಃಖ-ದುಗುಡಗಳಿಲ್ಲ
ಎಲ್ಲಿ ನೋಡಿದರಲ್ಲಿ ನಲ್‌ನಲವಿನುಲಿಯಲ್ಲಿ
ಮಾನಸವು ಹಿರಿಹಿಗ್ಗಿ ಸಂತಸದ ಸಿರಿಸುಗ್ಗಿ

'ಲೋಕವಿದು ಶೋಕದಾಯತನವಿದೆ' ಎಂಬವರು
ನಿನ್ನ ಮಧುಮಯ ಮಧುರ ಮಾಯಾ ವಿಲಾಸದಲಿ
ಸಿಲುಕಿದರೆ ಐಂದ್ರಜಾಲಿನಿಯ ಕುಂಚಿಕೆಯಿಂದ
ಮೋಹನವನಾಂತಂತೆ ಪಡುವರಮಿತಾನಂದ

ವಿಶ್ವದ ಮಹಾಶಕ್ತಿ ಮಾನವರಿಗೊಲಿದಿತ್ತ
ಸ್ವರ್ಗೀಯ ವರದಾನದಂತಿರುವೆ ಸಂತ್ರಸ್ತ
ಜನಮನವ ವೀಕ್ಷಣಾಮೃತದಿಂದ ಸೇಚಿಸುವೆ
ಚೈತನ್ಯ ರಸಧಾರೆಯಿಂದೊಸೆದು ತಂಪಿಸುವೆ

ಶಿಲೆಗಳಿಗೆ ನಯವಾಗಿ ರೂಪಿತ್ತ ಕೈವಾಡ
ವರ್ಣವಿನ್ಯಾಸದಲಿ ರೂಪರೇಖೆಯ ಚಿತ್ರ
ಸಂಗೀತ ಸರಸತೆಯ ಸ್ವರ್ಗೀಯ ಮಾಧುರ್ಯ
ಸಾಹಿತ್ಯ ಸೌಂದರ್ಯ ಸುವಿಲಾಸ ಚಾತುರ್ಯ

ನಾಟ್ಯ-ನೃತ್ಯಗಳಲ್ಲಿ ಅಭಿನಯದ ನಾವೀನ್ಯ
ಮಂದಿರೋದ್ಯಾನಗಳ ವಾಸ್ತುವಿನ ನೈಪುಣ್ಯ
ಇವು ನೀನು ವಾಸಕೆಂದಳವಡಿಸಿಕೊಂಡಿರುವ
ಸ್ವರ್ಣ ಸ್ವಪ್ನದ ಸತ್ಯ ಸಂಕೇತ ನಿಲಯಗಳು

□ ೧೯೪೪

ವಿಶ್ವಾತ್ಮ

ನಾಮ-ರೂಪಗಳಿಲ್ಲ ವಿಶ್ವಾತ್ಮನಾಗಿಹನು
ಆ ಮಹಾಮಹಿಮನೆಲ್ಲರೊಳಡಗಿ ಕೊಂಡಿಹನು
ಸೋಮ ಸೂರ್ಯರ ಕಣ್ಗಳಿಂದ ನೋಡುತಲಿಹನು
ಆ ಮರುತನಿಂದುಸಿರನಾಡುತ್ತಲಿಹನು

ಏಕ ದೇವನ ಮಕ್ಕಳೀ ನಾವು ಸೋದರರು
ಏಕ ಮನರಾಗಿಹೆವು ಬಡಿದಾಡಿಕೊಳೆವು
ಜಾತಿ ಜಾತಿಗಳಲ್ಲಿ ವೈರಾಗ್ನಿಯಿರದಿಹೆವು
ನೀತಿಯೊಂದೇ ಧರ್ಮ ಸರ್ವಪ್ರೇಮಿಗಳು

ಸರ್ವ ಸಮತಾ ದೃಷ್ಟಿ ಸಮನಾಗಿ ನಮಗಿರಲಿ
ವಿಶ್ವ ಸೌಹಾರ್ದದಲಿ ನಮ್ಮುಸಿರು ಹೊಮ್ಮಿರಲಿ
ಜ್ಞಾನಸೂರ್ಯನ ಬೆಳಕು ಲೋಕವನು ಬೆಳಗಿಸಲಿ
ಸಾನುರಾಗದಿ ವಿಶ್ವ ಮುನ್ನಡೆದು ಬರಲಿ

□ ೧೯೫೮

ಪೂರ್ಣದರ್ಶನ

ಕಾಡನುಳಿದೋಡಿ ಬಾ ಹುಚ್ಚು ಸನ್ಯಾಸಿ !
ನಾಡಿಗೊಲಿದೊಲಿದು ಬಾ ಏಕಾಂತವಾಸಿ !

ಬನದ ಮೌನದೊಳೇನು ಶಾಂತಿ ತುಂಬಿಹುದೇ ?
ಗಿರಿಯ ಗಹ್ವರದಲ್ಲಿ ತತ್ವ ಚೆಲ್ಲಿಹುದೇ ?
ಸ್ನಾನ-ಧ್ಯಾನಗಳಲ್ಲಿ ಮುಕ್ತಿ ಮಲಗಿಹುದೇ ?
ಶ್ವಾಸ ಧಾರಣೆಯಲ್ಲಿ ದೇವನೊಲಿದಿಹನೇ ?

ನಾಡ ಜನಜೀವನಕೆ ಬೆಚ್ಚಿ ಬೆದರುತ್ತ
ಸಂಸಾರವೆಂದರದು ದುಃಖಾಬ್ಧಿಯೆನುತ
ಬಾಳು-ಬದುಕನು ಬರಿಯ ಜಂಜಾಟವೆನುವೆ
ಹೇಡಿತನದಲಿ ಕಾಡನೇಕೆ ಮರೆಹೊಗುವೆ ?

ಲೋಕವೇ ದೇವನಿಗೆ ಸಾಕಾರ ರೂಪ
ಲೋಕವನ್ನುಳಿದೆಲ್ಲಿ ದೇವನಡಗಿರ್ಪ ?
ಕಾಡಿನಲೆ ದೈವ ಸಾಕ್ಷಾತ್ಕಾರ ಮಿಥ್ಯ
ಒಬ್ಬನಾತ್ಮೋದ್ಧಾರವದು ಬರಿಯ ವ್ಯರ್ಥ

ವಿಶ್ವಜೀವನದಲ್ಲಿ ಬೆರೆದೊಂದುಗೂಡಿ
ಶಾಶ್ವತದ ಸತ್ಯವನು ಸೇವೆಯಲಿ ನೋಡಿ
ಲೋಕಸೇವೆಯೆ ದೇವ ಸೇವೆಯೆಂದೆನಿಸು
ಸರ್ವರುದ್ಧಾರದಲಿ ಶಾಂತಿಯನ್ನರಸು

ನಿಸ್ವಾರ್ಥ ಸೇವೆಯಲಿ ತುಂಬು ಬಾಳುವೆಯು
ಬೆಳಕಾಗಿ ಬೆಳಗುವುದು ಅದೆ ದಿವ್ಯ ತಪವು
ಪಶುತನದ ಸಂತ್ಯಾಗ ಮಾನವತೆಯರಳು
ದಿವ್ಯತೆಯನೇರುವುದೆ ಪೂರ್ಣದರ್ಶನವು

□ ೧೯೫೨

ಜಿಜ್ಞಾಸೆ

ದೇವರೆಲ್ಲಿ ? ದೇವರೆಲ್ಲಿ ?
ತಿಳಿಯುವಾಸೆ ಮೂಡಿತು
ಗಹನ ತತ್ವದಾಳದಲ್ಲಿ
ಭಾವ ಮುಳುಗು ಹಾಕಿತು

ದೇವಕುಲದ ಗರ್ಭಗುಡಿಗೆ
ಹೋಗಿ ಹಿಂದೆ ಬಂದಿತು
ಕಲ್ಲ ಮೂರ್ತಿಯನ್ನು ಕಂಡು
ನಚ್ಚು ಬಾರದಾಯಿತು

ಪಾದ್ರಿಯಿರುವ ಕ್ರಿಸ್ತಗುಡಿಯ
ಬೊಂಬೆಯಲ್ಲಿ ದೇವನೇ ?
ಮುಲ್ಲನಿಹ ಮಸೀದಿಯೊಳಗೆ
ಶೂನ್ಯದಲ್ಲಿ ಮೆರೆವನೇ ?

ವೇದ ಮಂತ್ರ ಘೋಷದಲ್ಲಿ
ಯಾಗ ಹೋಮ ಹವನದೆ
ಪೂಜೆ ನೋಂಪಿ ನಿಯಮದಲ್ಲಿ
ದೇವರನ್ನು ಕಾಣದೆ

ಉಪನಿಷತ್ತು ಬೈಬಲ್ಲು
ವರ ಖುರಾನು ಗ್ರಂಥದೆ
ದೇವರನ್ನು ಹುಡುಕಿ ಹುಡುಕಿ
ಕಾಣದಾದೆ ಬಳಲಿದೆ

ಸಣ್ಣ ಮಗುವಿನೆಸೆವ ಮುದ್ದು
ಮೊಗದ ಹಾಸ ಮುಕುರದಿ
ಮೋಸ ಕಪಟ ಈರ್ಷ್ಯೆ ಮೋಹ
ರಹಿತ ಮನದ ಮೌನದಿ

ಪ್ರೇಮ ಭಾವ ಪೂರ್ಣವಾದ
ಮನುಜ ಹೃದಯ ಪೀಠದಿ
ಸೌಮನಸ್ಯ ಸಾಮರಸ್ಯ
ಯುಕ್ತ ದಯಾಸೂತ್ರದಿ

ದೇವನಿರವು ನಿಲುಮೆಯರಿತು
ತೋಷ ಪುಲಕವಾಂತೆನು
ಭಾವ ರೂಪ ದೇವನಡಿಗೆ
ಶಿರವ ಬಾಗಿ ನಿಂತೆನು

□ ೧೯೫೪

ಗೀತಾ ನವನೀತ

ಜೀವನ ರಂಗದ ಕರ್ಮಾಂಗಣದಲಿ
ಸುಖ-ದುಃಖಗಳೆರಡಾಡುತಿವೆ
ಸುಖದಲಿ ಹಿಗ್ಗದೆ ದುಃಖದಿ ಕುಗ್ಗದೆ
ಸಮತೆಯನಾಳ್ವುದೆ ನಲ್ ಬಾಳ್ವೆ

ನೀರೊಳಗಿದ್ದೂ ತಾವರೆಯೆಲೆಯಲಿ
ನೀರಂಟದನಾಸಕ್ತಿಯಲಿ
ಕರ್ಮದ ಫಲದಲಿ ನಿಷ್ಕಾಮತೆಯನು
ಅಳವಡಿಸುವುದೇ ಗುರಿಯಿಲ್ಲಿ

ಹೊಗಳಿಕೆಗುಬ್ಬದೆ ತೆಗಳಿಕೆಗಿಳಿಯದೆ
ನಿಂದಾಸ್ತುತಿಗಳನೊಂದಾಗಿ
ತಿಳಿಯುತ ಕರ್ಮದ ಪಥದಿ ನಿರಾಶೆಯು
ತಡೆಗೆಡೆಕೊಡಬಾರದು ಸಾಗಿ

ಎಲ್ಲಾ ಕರ್ಮವ ವಿಶ್ವಾತ್ಮಾರ್ಪಣ-
ವೆನ್ನುವ ಸೇವಾಯಜ್ಞದಲಿ
ಹೋಮಿಸೆ ಪಾಪದ ಲೇಪವೆ ಸೋಕದು
ಚಿತ್ತವು ಬೆರೆವುದು ಶಾಂತಿಯಲಿ

☐ ೧೯೪೮

ಆರಾಧನೆ

ವಿಶ್ವಾತ್ಮನ ಪೂಜೆಯದೋ
ದಿನ ದಿನ ನಡೆಯುವುದು
ಆಗಸವೇ ಹರಿವಾಣವು
ಅವನೆದುರಾಂತಿಹುದು

ಬೆಳಗುವ ರವಿ ಮಿರುಗುವ ಶಶಿ
ಅವನಿಗೆ ಸೊಡರುಗಳು
ಮಿನುಗುವ ಬಿಳಿ ತಾರೆಗಳೇ
ಚೆಲ್ಲಿಹ ಪುಷ್ಪಗಳು

ಒಯ್ಯೊಯ್ಯನೆ ತಂಗಾಳಿಯು
ಚಾಮರವಿಕ್ಕುತಿದೆ
ರಯ್ಯಂ ಮಿಗೆ ವಿಹಗಾಳಿಯು
ಗೀತವ ಹಾಡುತಿದೆ

ಮಳೆಗಾಲದ ಸವಿಸೋನೆಯು
ಅಭಿಷೇಕದ ಜಲವು
ಬೆಳುಗಾಲದ ಬೆಳೆಯೈಸಿರಿ
ಸೌಂದರ್ಯದ ನಲವು

ಆಕಾಶದ ಮುಗಿಲೋಳಿಯು
ಚೆಲುವಿನ ಮಂಟಪವು
ಏಳ್ ಬಣ್ಣದ ಕಾಮನ ಧನು
ಸಿಂಹದ ವಿಷ್ಟರವು

ಮಾನವರೆದೆಯೊಲವಿನ ಸಿರಿ
ಭಕ್ತಿಯು ನೈವೇದ್ಯ
ಈ ಬಗೆಯಾರಾಧನೆಯಲಿ
ಆನಂದವು ವೇದ್ಯ

□ ೧೯೫೩

ಪೂಜೆಗೆ ಬನ್ನಿ !

ದೇಶದ ದೇವನ ಪೂಜೆಗೆ ಬನ್ನಿ
ಸೇವಾ ಸುಮಗಳ ಹಿಡಿತನ್ನಿ
ಜನಹಿತ ಯೋಜನೆ ನೈವೇದ್ಯವನು
ಕಾರ್ಯದ ರೂಪದೊಳರ್ಪಿಸಿರಿ

ಮಾನವ ವರ್ಗವೆ ನಮ್ಮ ಸಮಾಜ
ಮಾನವ ಹಿತವೇ ಹಿರಿಯ ಗುರಿ
ಗುರಿಯನು ಸಾಧಿಸಲಾಗಲೆ ಸುಖವಿದೆ
ಜನತೆಯ ದೇವನು ಒಲಿಯುವನು

ಸೇವಾಕಾರ್ಯದ ಚೆಲು ಹೊಂಗನಸನು
ಕೃತಿಯಲಿ ಬೆಳುದಿಂಗಳ ಗೈಸೆ
ದೇಶದ ದೇವನು ತೋಷ ಪ್ರಸಾದವ
ಜನಗಣಮನಕೊಲಿದೀಯುವನು

□ ೧೯೫೪

ವಿನೋಬಾ ದರ್ಶನ

ಕೃತಯುಗದಿ ವಾಮನನು ಮೂರು ಪಾದಗಳಷ್ಟು
ಮೋಹರೂಪೀ ಬಲಿಯೊಳವನಿದಾನವ ಬೇಡಿ
ಸತ್ಯರಾಜ್ಯ ಸ್ಥಾಪನೆಯ ಗೈದ ಪಾಂಗಿನಲಿ
ಕ್ಷೇತ್ರಪತಿಗಳ ಕೈಯ ಹಿಡಿತದಲಿ ನರಳುತಿಹ
ಭೂಮಿದೇವಿಯ ಬಂಧಮೋಕ್ಷವನು ಗೈಯಲ್ಕೆ
ಓ ವಿನೋಬಾಜಿ ! ನೀನವತಾರವೆಸಗಿರುವೆ
ಕಲಿಯುಗದ ವಾಮನ ಸನಾಮನಿಹೆ ಮಾಮಹಿಮ !

ಭೂದಾನ ಪಾದಯಾತ್ರಿಯೆ ! ನಿನ್ನ ಯಾತ್ರೆಯಿದು
ಜನಮನಕೆ ಸಾಮ್ಯಯೋಗದ ದರ್ಶನವನೀವ
ಚೇತನೋತ್ಸವವಿಹುದು ಪ್ರತಿಯೊಬ್ಬ ಮಾನವನ
ಮನಮನದಿ ನೆಲಸಿರುವ ಪ್ರೇಮದೇವನನೊಲಿಸಿ
ಜಾಗ್ರತಂಗೊಳಿಸುತಿಹ ಗಾರುಡಿಗ ನೀನಿರುವೆ

ದಾನಯಜ್ಞದ ದೀಕ್ಷಿತನೆ ! ನೀನು ಬೋಧಿಸಿದ
ಗ್ರಾಮದಾನವೆ ರಾಮರಾಜ್ಯಕ್ಕೆ ಸೋಪಾನ
ಸಂಪತ್ತಿದಾನವೇ ತ್ಯಾಗಮಂತ್ರವ ಮೌನ
ಶ್ರಮದಾನವೆಂಬುದೇ ನಿಸ್ವಾರ್ಥತೆಯ ಕಿರಣ
ನಿನ್ನ ಬೋಧನ ಫಲವೆ ವೈಚಾರಿಕ ಕ್ರಾಂತಿ
ಇದರಿಂದ ಸಾಧ್ಯ-ಪರಿಣಾಮ ಜೀವನ ಶಾಂತಿ

ಭಾರತದಿ ಎಂದಿಗೂ ನಂದದಿಹ ಅಧ್ಯಾತ್ಮ
ದೀಪಕ್ಕೆ ನೀನೆಣ್ಣೆಯೆರೆದು ಸಂಸ್ಕೃತಿ ಕೃತಿಯ
ವಿಶ್ವಕ್ಕೆ ದರ್ಶನಂಗೈಸಿರುವೆ ದಾರ್ಶನಿಕ !
ನಿನ್ನ ಹೃದಯದೊಳಿರುವ ಶ್ರೀಮದೂರ್ಜಿತವಾದ
ಸದ್ವಿಭೂತಿಯು ಸತ್ವ ಭಗವದಂಶಿಕವಿಹುದು

☐ ೧೯೫೭

ಅಧ್ಯಾತ್ಮ ಕೇಸರಿ

ಧೀರ ಗಂಭೀರ ನಿರ್ಘೋಷವದು ಕೇಳಿಸಿತು
ಅಧ್ಯಾತ್ಮ ಕೇಸರಿಯ ದೀಪ್ತ ಗರ್ಜನೆ ಮೊಳಗಿ
ಮೇಘ ಮಂದ್ರ ಧ್ವನಿಯ ಸಾಗರದ ಬಿರುದನಿಯು
ಮಿರಿಸಿತು ಚೈತನ್ಯ ರಸಧಾರೆ ಹರಿಯಿಸಿತು
ಭರತದೇಶದ ದಿಗ್ದಿಗಂತಗಳ ದುಂದುಮಿಸಿ
ಪಡಿದನಿಯನೊದವಿಸುತ ಪಾಶ್ಚಾತ್ಯ ದೇಶಗಳ
ಅಜ್ಞಾನ ಮೌಢ್ಯವನ್ನೋಡಿಸುತ ಝೂಡಿಸಿತು

ಉತ್ತಿಷ್ಠತ ! ಜಾಗ್ರತ ! ಪ್ರಾಪ್ಯ ವರಾನ್ನಿಬೋಧತ !
ಏಳಿರೈ ಎಚ್ಚರಿರಿ ಗುರಿತನಕ ನಿಲ್ಲದಿರಿ
ಕ್ಲೈಬ್ಯವನು ಹೊಡೆದಟ್ಟಿ ಸೊಂಟವನು ಬಿಗಿಕಟ್ಟಿ
ಕ್ಷುದ್ರವಹ ಹೃದಯ ದೌರ್ಬಲ್ಯವನು ಬಿಟ್ಟುಬಿಡಿ
ತರುಣರೇ ! ಎದ್ದೇಳಿ ನರಸಿಂಹರೆಂದೆನಿಸಿ !
ನಿಮ್ಮ ಧಮನಿಗಳಲ್ಲಿ ಬಿಸಿರಕ್ತ ಹೊನಲಿಡಲಿ
ಮಾಂಸಖಂಡಗಳೆಲ್ಲ ಕಬ್ಬಿಣ್ಣಿನಂತಿರಲಿ
ನಿಮ್ಮ ನರನಾಡಿಗಳು ಉಕ್ಕಿನಂತುಬ್ಬಿರಲಿ
ಮೃತ್ಯುವನು ಲೆಕ್ಕಿಸದೆ ಎದೆಯುಬ್ಬಿ ಮುನ್ನುಗ್ಗಿ !

ಆರ್ಷವಾಣಿಯ ಸನಾತನ ಧರ್ಮ ಹಿಂದೊಮ್ಮೆ
ನಾಸ್ತಿಕರ ಚಾರ್ವಾಕ ಪಾಖಂಡ ಪಂಡಿತರ
ಹಿಡಿತಕೊಳಗಾಗಿ 'ಮಾಂ ತ್ರಾಹಿ' ಎಂದೆನುವಾಗ
ವೀರ ಶಂಕರ ಪರಿವ್ರಾಜಕಾಚಾರ್ಯ ವರ
ಅವತಾರವೆಸಗಿ ಧರ್ಮಧ್ವಜದ ಮೇಲೆತ್ತಿ
ಅಧ್ಯಾತ್ಮದದ್ವೈತ ಬ್ರಹ್ಮ ಜಯ ಗೈದಂತೆ
ಬಳಿಕ ದಶ ಶತಮಾನ ಕಳೆಯಲ್ಕೆ ಮತ್ತೊಮ್ಮೆ
ಮ್ಲೇಚ್ಛ ಪಾದಾಘಾತದಿಂದ ನುಗ್ಗಾಗಿರುವ
ಭಾರತೀಯರ ಧರ್ಮ–ತತ್ವ–ಸಂಸ್ಕೃತಿಯನ್ನು
ಈ ವೀರ ಸನ್ಯಾಸಿ ನೆಲೆಗೊಳಿಸಿ ರಕ್ಷಿಸಿದ

'ದೀನ ಮಾನವಸೇವೆ ಮಾಧವನ ವರಪೂಜೆ'
ಎಂಬ ಪಾವನ ಮಂತ್ರವನು ಬೋಧಿಸುತಿವನು
ದೀನ ದಲಿತ ದರಿದ್ರರಲಿ ದೇವನ ಕಂಡು
ಕಣ್ಣೀರಿನಭಿಷೇಕ ಗೈದರ್ಚಿಸಿದನೊಲಿದು

ಜ್ಞಾನ ದೀಧಿತಿಗಿವನು ಚಂಡಕರ ಮಾರ್ತಾಂಡ
ಮಾನವ ಪ್ರೇಮಗಂಗೆಗೆ ಜನ್ಮಗಂಗೋತ್ರಿ
ಭಕ್ತಿಸುಧೆ ವೈವೆತ್ತ ಸಿದ್ಧ ಸಾಧಕನೀತ
ಜ್ಞಾನ ಕ್ರಿಯೇಚ್ಛೆಗಳು ವಶವಾದ ಕತದಿಂದ
ಶಕ್ತಿ ತ್ರಿವೇಣಿಗಳ ಸಂಗಮೇಶ್ವರನಿವನು

ಪರಮಹಂಸರು ರಾಮಕೃಷ್ಣರವತರಿಸುತ್ತ
ಮೂಲ ಮೂರ್ತಿಯು ತೆರವಿ ದಕ್ಷಿಣೇಶ್ವರದಲ್ಲಿ
ಇದ್ದಲ್ಲಿಯೇ ಇದ್ದು ಭಕ್ತಜನ ಶಿಷ್ಯರಿಗೆ
ಬೋಧನಾನುಗ್ರಹಂ ಗೈದ ಪಾಂಗಿನಲೀತ
ಶ್ರೀ ವಿವೇಕಾನಂದ ಸುಂದರೋತ್ಸವ ಮೂರ್ತಿ-
ಯಂತೆ ಭಕ್ತರ ಬಳಿಗೆ ಪಾದಯಾತ್ರೆಯ ಬೆಳಸಿ
ಸರ್ವಧರ್ಮ ಸಮನ್ವಯಂ ಗೈದು ಭಾರತದ
ಶುಭ್ರ ಧವಲಿಮ ಕೀರ್ತಿ ಎತ್ತೆತ್ತಲೂ ಬೀರಿ
ನವಯುಗದ ನೂತನ ಸುಚೇತನಕೆ ರವಿಯಾಗಿ
ಬೆಳಬೆಳಗಿ ಮೆರೆದನಧ್ಯಾತ್ಮ ಕೇಸರಿಯಾಗಿ !

□ ೧೯೬೩

ಜಾತಿಯ ಭೂತ

ಮಾನವರೆ ವಿರಚಿಸಿದ ಜಾತಿಯ ಭೂತ ಬೃಹದಾಕಾರದೆ
ಬಾನು-ಬುವಿಯನು ಮೀರಿ ನಿಂತಿದೆ ಯಾರ ಕೈಗೂ ನಿಲುಕದೆ
ಸ್ವಾರ್ಥಜಿಹ್ವೆಯ ಚಾಚಿ ವಿಲಯದ ನಾಟ್ಯ ನಲಿಯಲು ತೊಡಗಿದೆ
ರಕ್ತನದಿಯನು ಹರಿಸಿ ನರತೆಯ ದಿವ್ಯತೆಗೆ ಮಸಿ ಹಚ್ಚಿದೆ
ಎಂದಿಗಿದಕಳಿಗಾಲ ಬರುವುದು ? ನಲುಮೆ-ಗೆಳೆತನ ಬಳೆವುದು ?

ಒಂದೇ ನೆಲತಾಯ್ ಬಸಿರಿನಿಂದಲಿ ಬಂದರೂ ನರರೆಲ್ಲರು
ಅಣ್ಣ – ತಮ್ಮದಿರಂತೆ ಬಂಧುತೆಯಿಂದ ಬಳವಿಯನೊಲ್ಲರು
ಹಿಂದುವಾದರದೇನು ? ಮುಸ್ಲಿಮರಾದರೇಂ ? ಮಾನವ ತನು
ಭಿನ್ನರೀತಿಯನಾಂತು ಕಾಂಬುದೆ ? ಸುಮ್ಮನೇ ಹಗೆತನವನು
ಬೆಳೆಸಿ ಒಬ್ಬರನೊಬ್ಬರಿರಿವರು ನರಕವನು ತಂದಿಡುವರು

ಸತ್ಯ – ಸೌಂದರ್ಯದಲಿ ಮಿಂಚುವ ನೇಹದಾಗರ ತಿರೆಯಲಿ
ಶಾಂತಿ-ಸುಖ-ಸಂತೋಷ ಸುಧೆಯನು ಹೀರುವುದನುಳಿಯುತ್ತಲಿ
ಕ್ರೋಧ ವಿಷ ವಹ್ನಿಯಲಿ ದಯೆಯನು ಹೋಮಿಸುತ ಕಟು ಕ್ರೌರ್ಯದ
ರೂಕ್ಷ ರಾಕ್ಷಸತನದಿ ಕೊಲ್ಲುವ ಕೊಲ್ಲಿಸುವ ಖಲ ದುರ್ಮದ
ಮುಂದೆಗೆಂದೂ ಷಡೆಯನೆತ್ತದೆ ಇರಲಿ ಸಾಗರದಾಳದೆ

ನರರು ಭೂಮಿಯೊಳೊಗೆದು ಶತ ಶತಮಾನಗಳು ಸಂದಿರುವುವು
ದಿವಸ ದಿವಸಕೆ ಬದ್ಧಿ ಬಳೆಯುತ ಮನುಜ ಸಂಸ್ಕೃತಿ ಸತ್ವವು
ಉತ್ತಮತೆಯನು ಪಡೆದು ದಿವ್ಯತೆಯನ್ನು ಗಳಿಪುದು ಧ್ಯೇಯವು
ಗುರಿಯ ಸಾಧಿಸದಿಂತು ಗರ್ತದಿ ಪತನವಿದು ದುರದೃಷ್ಟವು
ಹಿಂದು-ಮುಸ್ಲಿಮರೊಂದೆ ಬಟ್ಟಲಿನಲ್ಲಿ ನೇಹವನೀಂಟಲಿ !

ವಿಶ್ವಕೊಬ್ಬನೆ ಸಾಕು ದೇವರು ನಾಮರೂಪಗಳಿಲ್ಲದ
ಜಾತಿಯೊಂದೇ ಸಾಕು ನರರದು ಹೆಣ್ಣು ಗಂಡಿನ ಭೇದದ
ಆಯುತ್ತೈಲವು ಬತ್ತುವಸಕವು ಜೀವದೀಪವು ಬೆಳಗಲಿ
ಮಧ್ಯದಲಿ ನಂದಿಸುವ ಘಾತುಕತನದ ಕತ್ತಲೆ ಕಳೆಯಲಿ
ಕಟುಕತನ ಮೋಡಗಳು ಬಿರಿಯಲಿ! ಶಾಂತಿಚಂದ್ರಿಕೆ ಮಿರುಗಲಿ !

□ ೧೯೪೬

ವರ್ಷ ಋತು

[ಕಾಳಿದಾಸನ ಋತು ಸಂಹಾರದಿಂದ]

ಮಳೆಗರೆವ ಮೋಡಗಳು ಮದಮತ್ತ ಗಜದಂತೆ
ಕೋಲ್ಮಿಂಚು ಶೋಭಿಸೆ ಪತಾಕೆಯಂತೆ
ಸದ್ದನೆಸಗುತ್ತಿರಲು ಗುಡುಗು ಮದ್ದಳೆಯಂತೆ
ಮಳೆಗಾಲ ಬಂತೊಲಿದು ರಾಜನಂತೆ

ನೀಲನೈದಿಲೆಯೆಸಳಿನಂತೆ ಕಪ್ಪಾಗಿರುವ
ಅರೆದ ಕಾಡಿಗೆ ಮುದ್ದೆಯಂತೆ ಶೋಭಿಸುವ
ಗರ್ಭಿಣಿಯ ಮೊಲೆತುದಿಯ ಬಣ್ಣವನು ಹೋಲುತಿಹ
ಮೋಡಗಳು ತುಂಬಿದುವು ಬಾಂದಳವನೆಲ್ಲ

ಬಾಯಾರಿ ಚಾತಕಂಗಳು ಜಲವ ಬೇಡುತಿರೆ
ನೀರ ಭಾರದಿ ನಭದಿ ಜೋತ ಮುಗಿಲುಗಳು
ಮಳೆ ನೀರ ಸುರಿಸುತ್ತ ಕಿವಿಗಿಂಪ ಕರೆಯುತ್ತ
ಮೆಲ್ಲ ಮೆಲ್ಲನೆ ಸರಿಯುತಿವೆ ರಮ್ಯವಾಗಿ

ಮಿಂಚುಹೆದೆ ಬಿಗಿದಿರುವ ಮಳೆ ಬಿಲ್ಲನೊಂದಿರುವ
ಗುಡುಗೆಂಬ ಮದ್ದಳೆಯ ಬಾರಿಸುತ್ತಿರುವ
ಮೋಡಗಳು ದಾರಿಗರ ಮಾನಸವನ್ನು ನೋಯಿಸಿವೆ
ಮೊನಚಾದ ಧಾರೆಗಳು ಬಾಣದಂತಿರಿಯೆ

ಮೋಡಗಳ ದನಿಗೇಳಿ ಗಂಡುನವಿಲಿನ ಗುಂಪು
ಬಣ್ಣ ಬಣ್ಣದ ಗರಿಯ ಕೆದರಿ ಚೆಲುವಾಗಿ
ಹೆಣ್ಣುನವಿಲನ್ನಪ್ಪಿ ಮುತ್ತಿಟ್ಟು ಸಂಭ್ರಮದಿ
ಕುಣಿಯ ತೊಡಗುದುವಲ್ಲಿ ಇಂಪಾಗಿ ಹಾಡಿ

ಎರಡು ದಂಡೆಯ ಮರವನೆತ್ತಲೂ ಬೀಳಿಸುತ
ಹೆಚ್ಚಾದ ವೇಗದಲಿ ಕೊಳೆನೀರು ಹರಿಯೆ
ದುಷ್ಟನಾರಿಯರಂತೆ ಸುಳಿಸುಳಿಮ ಹುಚ್ಚಾಗಿ
ಹೊಳೆಗಳೊಲಿದೋಡುತಿವೆ ಕಡಲನೆಡೆಗಾಗಿ □ ೧೯೬೪

ಸಂಧ್ಯಾ ಸಾಗರ

ನೋಡದೋ ಪಡುವಣದ ಕಡಲಿನಲಿ ಕೆನ್ನೇಸ-
ರಿಳಿಯಲ್ಕೆ ಮುಳುಗಲ್ಕೆ ಸನ್ನದ್ಧನಿಹನು
ಕಿತ್ತಳೆಯ ರಸದಲ್ಲಿ ಬಂಗಾರದುಂಡೆಯನು
ಮುಳುಗಿಸಿದ ತೆರ ಕಣ್ಗೆ ಕಾಣುತಿಹನು

ಪಶ್ಚಿಮಾಕಾಶದಲಿ ಕೆಮ್ಮುಗಿಲುಗಳ ತಂಡ
ಸೌಂದರ್ಯ ಸಾಗರದಿ ತೇಲುತಿಹುದು
ಕಡಲಿನಲೆಗಳ ಮೇಲೆ ಚಿನ್ನ ಬಣ್ಣದ ಲೀಲೆ
ಕಣ್ಣ ಮುಚ್ಚಾಲೆಯಲಿ ಕುಣಿಯುತಿಹುದು

ಕಡಲ ತಡಿ ಮಳಲಿನಲಿ ಸುಮಗಳ ಪರಾಗವನು
ಚೆಲ್ಲಿದಂತೆಸೆಯುತಿದೆ ಹೊಬಿಸಿಲ ಲಾಸ್ಯ
ಎತ್ತೆತ್ತಲೂ ಹೊನ್ನ ಹುಡಿಯ ಹಸರಿಸಿದಂತೆ
ತೋರುತಿದೆ ಹಳದಿ ಬಣ್ಣದ ಮೃದುಲ ಹಾಸ್ಯ

ಗಂಧರ್ವ ಲೋಕದಿಂದಿಳಿತಂದ ತೆರದಿಂದ
ಅಂದವಾಗೆಸೆಯುತಿಹ ವಿಹಗಗಳ ಗುಂಪು
ಹೊಂಬಿಸಿಲಿನಲೆಯಲ್ಲಿ ರೆಕ್ಕೆಗಳ ಪಡಪಡಿಸಿ
ಹಾರುತ್ತ ಹೊರಹೊಮ್ಮಿಪುದು ಹಾಡಿನಿಂಪು

ಈ ಪರಿಯ ಸಂಧ್ಯಾ ವಿಲಾಸದಲಿ ಸಾಗರವು
ಮೈಮರೆತು ಸಂತಸವ ಸವಿಯುತಿರುವಂತೆ
ಸಂಜೆಚೆಲುವನು ದಿಟ್ಟಿಯಿಂದ ಮೊಗೆಮೊಗೆದೇಕೆ
ಮಾನವರು ತಮ್ಮೆದೆಯ ತುಂಬದಿಹರಿಂತೆ ?

☐ ೧೯೫೧

ದಹಿಸಿಬಿಡು ಚೀನೀಯರ

ಫಾಲ ನೇತ್ರದಿ ಭಾರತೇಶ್ವರ !
ದಹಿಸಿ ಬಿಡು ಚೀನೀಯರ
ಶೂಲವನು ಹಿಡಿದೆತ್ತಿ ಕುತ್ತುತ
ಕೊಲ್ಲು ವೈರಿಯ ಮೋಹರ

ಮಾವನಾ ಮನೆಯಲ್ಲಿ ದಳ್ಳುರಿ
ದಹಿಸ ತೊಡಗಿದೆ ರುದ್ರನೆ !
ಅಳಿಯನಾಗಿಯು ಕಣ್ಣ ಮುಚ್ಚುತ
ಕುಳಿತೆಯೇತಕೆ ಸುಮ್ಮನೆ ?

ನ್ಯಾಯ ನೀತಿಯ ಮೆಟ್ಟಿ ನಿಂತಿಹ
ಕ್ರೂರ ರಾಕ್ಷಸನೀತನು
ಹಿಂದಿ–ಚೀನೀ ಭಾಯಿ ಭಾಯಿ
ಎಂದು ದ್ರೋಹವ ಬಗೆದನು

ನಗೆಯ ತೋರುತ ಬಂದು ಸ್ನೇಹವ
ನಟಿಸಿ ಬೆನ್ನಿಗೆ ಇರಿದನು
ಹಗೆಯ ಸಾಧಿಸಿ ಕಟುಕತನದಲಿ
ಕುಟಿಲ ತಂತ್ರವ ಮೆರೆದನು

ದೇವರಿಲ್ಲವೆ ಇಲ್ಲವೆನ್ನುವ
ಭಾವನೆಯ ಬೇತಾಳನು
ಹಾವಿನಂತಿಹ ಬಣ್ಣವಿದೆ ಸರಿ
ನಂಜು ವಿಷವನು ಸುರಿವನು

ಇನ್ನು ಸೈರಣೆಯೇಕೆ ? ರುದ್ರನೆ !
ಅಗ್ನಿ ನೇತ್ರವ ಜ್ವಲಿಯಿಸು
ಚೀನ ಸೈನ್ಯದ ಮೇಲೆ ಪ್ರಳಯದ
ವೀರ ನಾಟ್ಯವನಾಡಿಸು

☐ ೧೯೬೩

ನಾವೆಲ್ಲ ನರಸಿಂಹರು

ಕಾಶ್ಮೀರ ದ್ರೌಪದಿಯ ಪಾಕಿ ದುಶ್ಶಾಸನನು
ಮುಂದಲೆಯ ಹಿಡಿದುಮುಕಿ ಸೆಳೆಯುತಿಹನು
ಅವನ ಕರುಳನು ಬಗಿದು ಭೂತಗಳಿಗುಣ್ಣಿಸಲು
ಭಾರತದ ಭೀಮನಿದೊ ಸಿದ್ಧನಿಹನು

ಜಾತಿ ಮತ ಪಕ್ಷ ಪಂಗಡ ಭೇದವೆಮಗಿಲ್ಲ
ವೀರ ಭಾರತಪುತ್ರರೇಕದೇಹಿಗಳು
ನಾವೆಲ್ಲ ಸೋದರರು ಅವಳಿ ಜವಳಿಗಳಂತೆ
ಗಡಿಯ ಶತ್ರುಗಳನ್ನು ಸೋಲಿಸುವೆವು

ದುಷ್ಟ ಪಾಕಿಸ್ತಾನಿ ರಕ್ತಬೀಜಾಸುರರು
ಮುನ್ನುಗ್ಗಿ ಮೇಲೇರಿ ಬರುತಿರುವರು
ಅವರ ಸೊಕ್ಕನು ಮುಕ್ಕಿ ಹುಟ್ಟಡಗಿಸಿಡಲೆಮ್ಮ
ಧೀರ ಸೈನಿಕ ಶಕ್ತಿ ರಕ್ತೇಶ್ವರಿ

ಹೇಡಿಯೆನ್ನಿಸಿ ನೂರು ವರ್ಷ ಬಾಳುವುದೇಕೆ ?
ವೀರನೆನ್ನಿಸಿ ಒಂದು ನಿಮಿಷ ಸಾಕು
ರಾಷ್ಟ್ರರಕ್ಷಣೆಗಾಗಿ ಬದ್ಧ ಕಂಕಣರಾಗಿ
ಸೊಂಟ ಕಟ್ಟುತೆ ವಿಜಯ ಗಳಿಸಬೇಕು

ಬುದ್ಧ–ಗಾಂಧಿಯ ದೇಶದವರು ನೀತಿಪ್ರಿಯರು
ನಾವಹಿಂಸಾವಾದಿಗಳು ಶಾಂತರು
ಜಗಳ ಗಂಟಿಗಳೆದ್ದು ನಮ್ಮನ್ನು ಕೆಣಕಿದರೆ
ಆಗುವೆವು ನಾವೆಲ್ಲ ನರಸಿಂಹರು

ಭಾರತದ ವೀರಪುತ್ರರೆ ! ನೀವು ಹೇಡಿಗಳೆ ?
ಮುನ್ನುಗ್ಗಿ ಶತ್ರುಗಳ ಹೊಡೆದಟ್ಟಿರಿ
ಅಡಿಯ ಮುಂದಿಡೆ ಸ್ವರ್ಗ ಎದೆಯ ನೆತ್ತರ ಸುರಿಸೆ
ವೀರರಿಗೆ ಜಯಲಕ್ಷ್ಮಿ ಮಾಲೆ ಹಾಕುವಳು

☐ ೧೯೬೫

ಗಾಂಧಿಯ ಪವಾಡ

ಭಾರತವು ಹೂಡಿರುವ ಸಮರ ಸಾಹಸದಲ್ಲಿ
ಅಸ್ತ್ರ-ಶಸ್ತ್ರಗಳಿಲ್ಲ ಹೊಡೆದಾಟವಿಲ್ಲ
ಸತ್ಯವೊಂದೇ ಬಲವು ನ್ಯಾಯವೊಂದೇ ಛಲವು
ಹಿಡಿದ ಹಟವನು ಬಿಟ್ಟುಕೊಡಲೇ ಇಲ್ಲ

ಅರ್ಧ ನಗ್ನ ಶರೀರ ಬೆತ್ತ ನಡಿಗೆಯ ವೀರ
ಸರ್ವಸೇನಾಪತ್ಯ ವಹಿಸಿಕೊಂಡು
ಭಾರತೀಯರನೊಂದು ಗುರಿವಿಡಿದು ಮುಂತಂದು
ಸ್ವಾತಂತ್ರ್ಯಪಥದಲ್ಲಿ ನಡೆಸಿದನು ದಂಡು

ಒಂದು ಕೆನ್ನೆಗೆ ಹೊಡೆಯೆ ಮತ್ತೊಂದು ತೋರುವುದು
ಯೇಸುಕ್ರಿಸ್ತನ ತತ್ವ ನೀತಿಯಾಚಾರ
ಪೆಟ್ಟು ಕೊಟ್ಟರೆ ತಿನ್ನುವುದು ಮಾತ್ರ ಗೊತ್ತಿಹುದು
ತಿರುಗಿ ಕೈಯೆತ್ತುವುದು ತಿಳಿಯದ ವಿಚಾರ

ಸೂರ್ಯ ಮುಳುಗದ ರೀತಿ ವಿಸ್ತಾರವಾಗಿರುವ
ಸಾಮ್ರಾಜ್ಯ ಚಕ್ರಾಧಿಪತ್ಯ ನಡುಗಿದುದು
ಸರ್ವ ಶಕ್ತಿಯ ಪಡೆದ ಉದ್ದಂಡ ದೋರ್ಬಲದ
ಕಡಲ ರಾಣಿಯ ಮೊಗವು ಕಪ್ಪಿಡಿದುದು

ಇಂತು ಸತ್ಯಾಗ್ರಹದಿ ಹಿಂಸೆಯಿಲ್ಲದ ಪಥದಿ
ರಕ್ತವನು ಚೆಲ್ಲದೆಯೆ ಜಯವು ಸಿದ್ಧಿಸಿತು
ಲೋಕದ ಚರಿತ್ರೆಯಲಿ ಹೊಸತೊಂದು ಪಾಠವಿದು
ಗಾಂಧಿಯ ಪವಾಡದಿಂ ವಿಜಯ ಬಂತು

☐ ೧೯೪೭

ರಕ್ತ ಸಂಧ್ಯೆ

"ಢಂ" ಎಂದು ಗುಂಡುದನಿ ಕಿವಿಗೆ ಕೇಳುವ ಮುನ್ನ
ಪೂಜ್ಯಾತ್ಮ ಗಾಂಧಿಯೊಡಲನು ಗುಂಡುಹರಳುಗಳು
ವಿಶ್ವಾಸಘಾತಕಿಯ ಕೈಕೋವಿಯಿಂದೊಗೆದು
ಹೊಕ್ಕು ಮೊದಲೇ ಜನರ ದುಗುಡ ಹೊರೆಯಿಂ ಬಾಗಿ
ಬಳುಕಿದ್ದ ಉಪವಾಸಕೃಶ ಪುಣ್ಯವಪು ತಿರೆಗೆ
ಬಿದ್ದತ್ತು ಮಾನವರ ಭಾಗ್ಯನಿಧಿ ಬೀಳ್ವಂತೆ

ಸೂರ್ಯನಪರಾಂಬರದಿ ಕ್ರೋಧಾರುಣಜ್ವಾಲೆ–
ಯಿಂದ ಕಣ್ಣಿಂ ಕೆಂಡವನು ಕಾರಿ ಕೆಂಪಾಗಿ
ಭಾರತದ ನಾಯಕನ ಮರಣವನು ದಿಟ್ಟಿಸಲು
ಸಹಿಸನೋ ಎಂಬಂತೆ ಮೊಗತಿರುಹಿ ಮರೆಯಾದ
ಗಾಂಧೀಜಿಯ ಕೆನ್ನೆತ್ತರಿಂದ ಕೆಂಪಾದಂತೆ
ರಕ್ತಸಂಧ್ಯೆಯು ರಕ್ತನನ್ನುಗುಳಿ ಮರೆಯಾಯ್ತು

ವಿಶ್ವದ ಮಹಾಜ್ಯೋತಿ ನಂದಿದೊಡೆ ಕತ್ತಲೆಯು
ಮೊತ್ತವಾವರಿಸಿತ್ತು ಇಂತು ಪೂಜ್ಯ ಮಹಾತ್ಮ
ಸೂರ್ಯನಸ್ತಂಗಮಿಸೆ ಜನಹೃದಯ ಕಮಲಗಳು
ಮುದುಡಿ ಮುಗುಳಾಗಿ ದುಃಖಾಂಧತೆಯೊಳೊರಗಿದುವು
ಜಾತಿಯ ಮಹಾಭೂತ ಗಾಂಧಿಯಂ ನುಂಗಿತ್ತು

ಓ ಮಹಾತ್ಮನೆ ! ನಿನ್ನ ಮಕ್ಕಳೀ ನಾವಿಹೆವು
ನಿನ್ನ ಹಿರಿಗುರಿಯನ್ನು ಸೇವೆಯಾದರ್ಶವನು
ಶಾಂತಿ ಸತ್ಯಾಹಿಂಸೆಯೆಂಬ ಗುಣಮಣಿಗಳನು
ನಮ್ಮ ಹೃನ್ಮಂದಿರದಿ ನೆಲೆಗೊಳಿಸು ನಿನಗೀಗ
ಇದೊ ತಿಲಾಂಜಲಿವೀವೆವಳಲ ಕಂಬನಿಯಿಂದ

□ ೧೯೪೮

ಸಮದೃಷ್ಟಿ

[ಕಥನ ಕವನ]

ಹಿಂದೆಯೊಂದಾನೊಂದು ದಿನದಲಿ
ಪರಮಪಾವನೆಯಾದ ಗಂಗಾ–
ನದಿಯೊಳೊರ್ವನು ವಿಪ್ರ ದಿನಮಣಿ–
ಯುದಯದಲಿ ಮಿಾಯುತ್ತಲಿದ್ದನು
ಬಾಯಿಯಲಿ ಮಣಮಣನೆ ಮೆಲ್ಲನೆ
ಪುರುಷಸೂಕ್ತದ ವೇದಋಚೆಗಳ
ಹೇಳುತಲಿ ಮೂಬಾರಿ ಮುಳುಗುತ
ಬಂದು ಮೇಲಕೆ ನೀರ ಬಳಿಯಲಿ
ನಿಂದು ಮಣ್ಣೆಣ್ಣೆಗಳ ಜಿಡ್ಡಿನೊ–
ಳೊಂದಿ ಕಪ್ಪಗೆಯಾದ ಪಂಚೆಯೊ–
ಳೊರಸುತಿದ್ದನು ತನ್ನ ಮೈಯನು

ಆಗಲೊಬ್ಬನು ಶೂದ್ರಜಾತಿಯ
ಮಾನವನು ಹತ್ತಿರದ ನೀರಿಗೆ
ಹಾರಿದನು ಈಜಾಡಿ ಮಿಾಯಲು
ಬಿದ್ದ ರಭಸಕೆ ನೀರ ಹನಿಗಳು
ಹಾರಿ ಮೇಲಕೆ ಹಾರ್ವನಂಗಕೆ
ಬೀಳಲಾತನು ಕಣ್ಣ ಕೆರಳಿಸಿ
ಹುಬ್ಬನುಬ್ಬಿಸಿ ತೀಕ್ಷ್ಣ ವಾಣಿಯೊ–
ಳಿಂತು ನುಡಿದನು–

ಏನು ಮೂಢನೆ !
ನಾವು ದೇವರ ಮುಖದಿ ಜನ್ಮಿಸಿ–
ದವರು ಬ್ರಾಹ್ಮಣರುಚ್ಚವಂಶೋ–
ದ್ಭವರು ನೀನತಿ ಹೀನ ಕುಲಜನು
ನೀರ ಹಾಯಿಸಿ ನನಗೆ ಮಲಿನತೆ–
ಯಾಗಿಸಿದೆ ಭ್ರಷ್ಟಾತ್ಮನೆನ್ನುವ
ಬಿರುಸುನುಡಿಗಳ ಮಳೆಯ ಕರೆಯಲು

ಶೂದ್ರ ಹೆದರಿಕೆಯಿಂದ ನಡುಗುತ
ಕೈಗಳನು ಮುಗಿಯುತಿರೆ ವಿಪ್ರನು
ಹೊಡೆಯಲಾತುರನಾಗಿ ಕೈಯೆತ್ತಿದನು

ಸನಿಯದಿ ಮೋಹವೆಸಗುವ
ಸಂತ ತುಲಸೀದಾಸರೀಕ್ಷಿಸಿ
ಬ್ರಾಹ್ಮಣನ ಕೋಪಕ್ಕೆ ಕಾರಣ
ಕೇಳಿ ತಡೆಯಲು ವಿಪ್ರನೊರೆದನು—

ಶೂದ್ರನಿವ ಭಗವಂತ ಪಾದೋ-
ದ್ಭೂತನತಿ ಹೀನತಮನೆಂದೀ
ಪುರುಷ ಸೂಕ್ತದಿ ದೇವರೇ ನುಡಿ-
ದಿಹರು ಇಂಥವನೆನಗೆ ನೀರನು
ಹಾರಿಸುತಲಪವಿತ್ರಗೈದನು

ಆಗ ತುಲಸೀದಾಸರೆಂದರು—
ಗಂಗೆಯೆಲ್ಲಿಂದೊಗೆದು ಬಂದಳು ?
ವಿಪ್ರನೆಂದನು—
ವಿಷ್ಣು ಚರಣ ಸ-
ರೋಜ ಸಂಜಾತೆಯು ಪವಿತ್ರೆಯು

ದಾಸರೆಂದರು—
ಯಾವ ದೇವರ
ಕಾಲಿನಿಂದುದಿಸಿರುವ ಗಂಗೆಯು
ಪತಿತಪಾವನೆಯಾದಳೊ ಆ
ಪಾದದಿಂದಲೆ ಹುಟ್ಟಿ ಬಂದಿಹ
ಈತನೆಂತತಿ ಹೀನನಾಗುವ ?
ವಿಪ್ರನವನತ ಮೂರ್ಧನಾದನು

□ ೧೯೪೬

ಹುಲ್ಲು ಹೂ

ಮಳೆಗಾಲ ಮುಗಿದಿಹುದು ಭೂವನಿತೆ ಹಳೆಯುಡಿಗೆ
ಕಳೆದುಳಿದು ಹೊಚ್ಚ ಹೊಸ ಹಸಿ ಹುಲ್ಲಿನ
ಹಸುರು ಹಚ್ಚಡವುಟ್ಟು ಸಿಂಗಾರವಾಗಿಹಳು
ಕವಿಮನವು ಗೈಯುವುದು ಸೌಂದರ್ಯಪಾನ

ಇರುಳಿನಂಬರದಲ್ಲಿ ಚುಕ್ಕಿಗಳು ನಗುವಂತೆ
ಹಾಸು ಹುಲ್ಲಿನೊಳಲರು ಮಿರುಮಿನುಗುತಿಹವು
ಕಣ್ಣಿಟ್ಟು ನೋಡಿದರೆ ಬಗೆಬಗೆಯ ಹೂವಿನಲಿ
ಲಾವಣ್ಯ ವೈಶಿಷ್ಟ್ಯ ಸೂಕ್ಷ್ಮತೆಯೊಳಿಹವು

ಆದರೂ ಲೋಕದಲಿ ನೋಳ್ಪರಾರಿಲ್ಲ
ಆರಿಗಾಗೆಸೆವುವೋ ಬಲ್ಲವನೆ ಬಲ್ಲ
ನಿಸ್ವಾರ್ಥ ಸೇವೆಯಿದು ವ್ಯಷ್ಟಿಯ ವಿಚಿತ್ರ
ಇದರಿಂದ ಪೂರ್ಣತೆ ಸಮಷ್ಟಿಯ ಸುಚಿತ್ರ

☐ ೧೯೪೦

ದೇವ ಲೀಲೆ

ಬಿಸಜ ಮಿತ್ರನ ಪ್ರಖರ ಕಿರಣದಿ
ಶಶಿಯು ಸೂಸುವ ಜೊನ್ನದಿ
ಮೆರೆದು ಮಿನುಗುವ ಕೋಲುಮಿಂಚಿಲಿ
ಮೊರೆದು ಗಜರುವ ಗುಡುಗಿಲಿ

ವರ್ಷ ಋತುವಿನ ಮಳೆಯ ಸುರಿತದಿ
ಹರ್ಷ ಮಧುವಿನ ಕಾಲದಿ
ಉಷೆಯ ಪೀತ ಪ್ರಭೆಯ ಪಟದಲಿ
ಎಸೆವ ಸಂಜೆಯ ಸೊಬಗಿಲಿ

ಸುರಪ ಧನುವಿನ ಸಪ್ತ ವರ್ಣದಿ
ಮೆರೆವ ಮಂಜುಲ ರೂಪದಿ
ಸರಸ ವಿಕಸಿತ ಕುಸುಮ ಗುಚ್ಛದಿ
ಸುರಿವ ಸೌರಭ ಸಾರದಿ

ನೀಲ ವರ್ಣದ ರಮ್ಯ ಗಗನದಿ
ಕಾಳ ಮೇಘದ ಕ್ರೌರ್ಯದಿ
ಸಾಗರದ ವೀಚಿಗಳ ಕುಣಿತದಿ
ಸಾಗುತಿಹ ನದಿ ನಿಕರದಿ

ಕವಿಯ ಮಾನಸ ಭಾವ ರಂಗದಿ
ಸವಿಯ ಜಿನುಗುವ ಕಾವ್ಯದಿ
ಭಕ್ತ ಹೃದಯದ ಸದಯಧಾಮದಿ
ಸಕ್ತ ನಿಶ್ಚಲಪ್ರೇಮದಿ

ಎಲ್ಲಿ ನೋಡಿದರಲ್ಲಿ ದೇವನ
ಲೀಲೆಯುಜ್ವಲ ಕಿಡಿಗಳು
ಹೊಸೆದು ಮಹಿಮೆಯ ಬೆಸೆದು ಭಕ್ತಿಯ
ಎಸೆವುವದ್ಭುತ ಕುಡಿಗಳು

□ ೧೯೩೬

ಕವಿ ಕಡೆಂಗೋಡ್ಲು

ಕಡಲ ಕರೆನಾಡಿಂದ ಜನಿಸಿ ಮುಂದಕೆ ಬಂದ
ಕವಿಯೋಗಿ ಸಾಹಿತ್ಯ ರಸತಪಸ್ವಿ
ಸತ್ಯ 'ಪಶುಪತಿ'ಯಾಗಿ ನಿತ್ಯ ಚೇತನನಾಗಿ
ಭಾವಲೋಕದ ಚಕ್ರವರ್ತಿಯೆನಿಸಿ,—

ನವ ಕಾವ್ಯ ಕನ್ನಿಕೆಗೆ ಸಾಹಿತ್ಯ ಶಾರದೆಗೆ
ಮೊದಲ ಕಾಣ್ಕೆಯ ನೀನು 'ಕಾಣಿಕೆ'ಯ ಕೊಟ್ಟೆ
ಕವಿತೆದಯಿತೆಯ 'ನಲ್ಮೆ'ಯಿಂದೊಲಿಸಿ ಜನಮನವ
ಪ್ರಣಯ ಕರುಣೆಯ ರಸದಿ ತಣಿಸಿ ಬಿಟ್ಟೆ

ಭಾವ ದೇವಿಯನೊಲಿಸಿ ಭವ್ಯ ಭಕ್ತಿಯ ಸಲಿಸಿ
ಸಾಹಿತ್ಯ ಮಂದಿರದ ಭಕ್ತನಾಗಿ
'ಹಣ್ಣುಕಾಯಿ'ಯ ಹಿಡಿದು 'ಪತ್ರಪುಷ್ಪ'ವನಾಯ್ದು
ಅರ್ಪಿಸಿದೆ ಸಾಹಿತ್ಯ 'ರಸಿಕ'ನಾಗಿ

ಕವಿರತ್ನನೆನಿಪ ರತ್ನಾಕರಗೆ ಜನಿಯಿತ್ತು
ಮುದ್ದು ಮುದ್ದಣನನ್ನು ತೂಗಿದವಳು—
ಪಡುಗಡಲ ಕನ್ನಡದ ತಂಗಿ ತುಳುನಾಡಿತಿಯು
ಕವಿ ಕಡೆಂಗೋಡ್ಲುವಿಗೆ ತಾಯಿಯೆನಿಸಿದಳು

☐ ೧೯೭೮

ಮಂಜೇಶ್ವರ ಗೋವಿಂದ ಪೈ

ಇತಿಹಾಸ ಸಂಶೋಧನಂಗಳಲಿ ಕನ್ನಡದ
ಪ್ರಾಚೀನ ಸಾಹಿತ್ಯ–ಶಾಸನಂಗಳಲಿ
ವಿವಿಧ ಲೇಖನ ನಿಚಯದಿಂದ ಪಾಂಡಿತ್ಯದಲಿ
ತುಂಬಿರುವ ಕೊಡದಂತೆ ಮೆರೆಯುವವರು

ಹಲವು ಭಾಷೆಗಳಲ್ಲಿ ತಿಳಿವು ಬೆಳಕಿಡಿದವರು
ಗ್ರೀಕಿನಲಿ ಕನ್ನಡವ ಹುಡುಕಿ ಹಿಡಿದವರು
ಕಾವ್ಯ ಪಂಥಾನದಲಿ ಹೊಸರೀತಿಯುಳವಡಿಸಿ
ನಂದದಿಹ ದೀಪವನ್ನುರಿಸುತಿರುವವರು

ಯೇಸು–ಬುದ್ಧರ ಕೊನೆಯ ದಿನವನ್ನು ಕಾವ್ಯದಲಿ
ಕಂಡರಿಸಿ ಮೂಡಿಸಿದ ರೂವಾರಿಯಿವರು
'ಗಿಳಿವಿಂಡ' ಸುಡಿಸಿದರು, 'ಹೆಬ್ಬೆರಳ' ತೋರಿದರು
ನವ ಕಾವ್ಯ ತಾತ ಗೋವಿಂದ ಪೈಯವರು

☐ ೧೯೬೯

ಮುಳಿಯ ತಿಮ್ಮಪ್ಪಯ್ಯ

ಹಳೆಗನ್ನಡದ ನುಡಿಯ ಸಾಹಿತ್ಯ ಸಾಗರವ
ತನ್ನೊಳಳವಡಿಸಿರುವ ಹಿರಿಮೆಯಾಂತವರು
'ನಾಡೋಜ ಪಂಪ'ನಿಗೆ ಬೆಳಕಿತ್ತು ಅವನ ಕೃತಿ
ಯುಗ್ಮಗಳ ಸವಿಯನ್ನು ಜನತೆಗಿತ್ತವರು

ತಮ್ಮತನವೊಂದಿ ಹುರುಳಿಂದ ಕಳೆಗೊಂಡಿರುವ
ಹೊಸಗನ್ನಡಗ ಶೈಲಿಯೆತ್ತಿ ಹಿಡಿದವರು
ರಾಮಕಥೆಯಲ್ಲಿ ನವನೀತತೆಯ ತಂದಿತ್ತು
ಗಾಂಧಿಯಾದರ್ಶವನು ತುಂಬಿ ತೋರ್ದವರು

ಚಂದ್ರಾವಳೀ ಕಥೆಯ ಸುವಿಲಾಸ ಸುರಿದವರು
'ಕನ್ನಡದ ಕೋಗಿಲೆ'ಯ ನುಡಿಸಿದವರು
ಕನ್ನಡಾಧ್ಯಾಪನದಿ ವಿದ್ಯಾರ್ಥಿವೃಂದಕ್ಕೆ
ಕನ್ನಡದೊಳೊಲವೆರೆದ ಮುಳಿಯದವರು

ತುಳುನಾಡು ಕುಂಬಳೆಯು ಪಾರ್ತಿಸುಬ್ಬನನೆತ್ತಿ
ಯಕ್ಷಗಾನದ ಸೊಬಗ ಗುರುತುಗೈದವರು
'ಕವಿರಾಜಮಾರ್ಗದ ವಿವೇಕ'ವನು ಹೊರಪಡಿಸಿ
ಕವಿ 'ಜಯಾಳ್ವ'ನು ಬರೆದನೆಂದು ನುಡಿದವರು

ಸಾಹಿತ್ಯ ಸಮ್ಮೇಳನಾಧ್ಯಕ್ಷ ಪೀಠದಲಿ
ಪಂಪನ ಸಹಸ್ರಮಾನೋತ್ಸವದಲಿ
ಪಾಂಡಿತ್ಯ ಪರಿಪೂರ್ಣ ಭಾಷಣವನೊರೆಯುತಲಿ
ಸಾಹಿತ್ಯ ದೇವಿಯನು ಬೆಳಗಿದವರು

ಬರೆದು 'ಪಶ್ಚಾತ್ತಾಪ' ಕಾದಂಬರೀ ಪಥವ
ಸೃಜತೆಗೆ ಕಲ್ಪನೆಯ ಬಣ್ಣ ಬೆರೆದವರು
'ವೀರ ಬಂಕೆಯ'ನನ್ನು ಇತಿಹಾಸದಿಂದಾಯ್ದು
ಕನ್ನಡದ ಕಲಿಯಾಗಿ ನಿಲಿಸಿದವರು

□ ೧೯೫೦

ಶಾಕುಂತಲ

ಗೀರ್ವಾಣ ಸಾಹಿತ್ಯ ಸಾಮ್ರಾಜ್ಯದೇಕೈಕ
ಸಾರ್ವಭೌಮ ಪ್ರಭುವೇ ! ಓ ಚಿರಂತನ ಕಾವ್ಯ
ರಸ ಋಷಿಯೆ ! ಶೃಂಗಾರ ರಸ ಸುಧಾ ಸಾಗರನೆ !
ಕವಿ ಕುಲಾಗ್ರಣಿ ಕಾಳಿದಾಸ ಕವಿವರ್ಯನೇ !
ವಿಸ್ತಾರ ಭಾರತಾಮೃತ ಪಯೋನಿಧಿಯಿಂದ
ಮೊಗೆದೆತ್ತಿದ್ಯೆ ನೀನು ಶಾಕುಂತಲಾಖ್ಯ ಸುರು-
ಚಿರ ದೃಶ್ಯರತ್ನವನು ಚಿರಕಾಲನೂತ್ನವನು

ಅಲ್ಲಿ ನೀ ಬಣ್ಣಿಸಿದ ಆ ಕಣ್ವಸುದ್ಯಾನ
ಪ್ರಕೃತಿ ಮಧುರತೆವೆತ್ತ ಕೋಮಲ ಲತಾಂಗಿಯರು
ಅವರ ಚೇತೋಹಾರಿಯಾದ ಸರಸೋಕ್ತಿಗಳು
ಹೂವಿಂದ ನಗುತಿರುವ ಮಲ್ಲಿಗೆಯ ಹೊಸ ಬಳ್ಳಿ
'ವನಜ್ಯೋತ್ಸ್ನೆ'ಯೆಂದೊಪ್ಪಿ ಮಾಮರವನಪ್ಪಿದುದು
ಸ್ನೇಹರಸದಲಿ ನಾಂದ ಹರಿಣಗಳು ಕೋಗಿಲೆಯು
ವಿರಹ ಸಂತಾಪದಲಿ ಪದ್ಮಪತ್ರದ ಮೇಲೆ
ನಖ ಲಿಖಿತ ಶೃಂಗಾರ ಮಧುರ ಪ್ರಣಯೋಲ್ಲೇಖ
ಮಾಲಿನೀತೀರದಲಿ ಸತಿಪತಿಯರೊಂದಾದ
ಪ್ರಕೃತಿ ವಿರಚಿತ ಲತಾವಲಯದಲಿ ಸುಮಶಯ್ಯೆ
ಸಿಡಿಲಂತೆ ಗುಡುಗುಡಿಪ ದೂರ್ವಾಸನುರುಶಾಪ
ಆತ್ಮಜೆಯ ಪತಿಗೃಹಕೆ ಬೀಳ್ಕೊಡುವ ವಾತ್ಸಲ್ಯ
ಬೆರಳಿಂದ ಸಿಡಿದುರುಳಿ ಮರವೆಮಾಯೆಗೆ ಮುಖ್ಯ
ಕಾರಣಾಭಿಜ್ಞಾನ ರತ್ನಾಂಗುಲೀಯಕವು
ಸಿಂಹಶಿಶುವನು ಹಿಡಿದ ವೀರ ಭರತಕುಮಾರ
ಕಡೆಗೆ ಪಶ್ಚಾತ್ತಪ್ತ ಪಂಶುದ್ಧ ಪತಿಯೊಡನೆ
ಬೆರೆದ ಶಾಂತೋಲ್ಲಸಿತೆ ಹದಿಬದೆ ಶಕುಂತಲೆಯು
ರಸಿಕ ಸಹೃದಯ ಚಿತ್ತಭಿತ್ತಿಯಲಿ ಬರೆದಿರಿಸಿ-
ದುರು ನವ್ಯ ರಮಣೀಯ ಪ್ರತಿಕೃತಿಗಳುಯ್ಯಾಲೆ
ಎಂದಿಗೂ ಮಾಸದಿಹ ರಸಚಿತ್ರಗಳ ಶಾಲೆ

□ ೧೯೫೧
ಬೆಳಕು/ ೮೫

ರೈತರ ಹಾಡು

ನಾಡಿನ ಜನರಿಗೆ ನಾವ್ ಬೆನ್ನೆಲುಬು
ಅನ್ನವ ದುಡಿವುದೆ ನಮ್ಮಯ ಕಸುಬು
ಆದರೆ ಏನೆಂದೊರೆಯಲಿ ನಾವು ?
ಪಾಲಿಗೆ ಬರುವುದು ಬರಿ ಮಳಲು

ಮಳೆಯಲಿ ಚಳಿಯಲಿ ನಡುನಡುಗುತ್ತ
ಬಿಸಿಲಿನ ಬೆವರಲಿ ಕುದಿಕುದಿಯುತ್ತ
ಪಾಪದ ಪಶುಗಳ ಎದೆಯುರಿಸುತ್ತ
ಕೋಲಿಂ ಬಡಿಯುತ ಉಳುವೆವು ಸುತ್ತ
ಧನಿಗಳ ಸ್ವಾರ್ಥಕ್ಕೆ ನಮ್ಮ ಪರಾರ್ಥಕ್ಕೆ

ನೇಸರು ಮೂಡುವ ಮೊದಲಿಂ ಹಿಡಿದು
ಸಂಜೆಯು ನೆರಳಿನ ಮಬ್ಬಿನವರೆಗು
ಕರ್ಮಕ್ಷೇತ್ರದ ಹೊಲ–ನೆಲದಲ್ಲಿ
ಒಲವನು ಗಣಿಸದೆ ಮಮತೆಯನೆಣಿಸದೆ
ಬಿರುಮಾತಿನ ವಿಷ ಹಾಲಾಹಲದಿ
ಹೆಂಡತಿ- ಮಕ್ಕಳ ಗೆಯ್ಸುವೆವು
ಗೇದೂ ಗೇದೂ ಸೋಲುವೆವು

ಬೆಳೆ ಬರುವಾಗ ಧನಿಗಳು ಬೇಗ
ಬರುವರು ಕೊಂಡೊಯ್ವರು ಮನೆಗೆ
ಉಂಡಿರೊ ನೀವು, ತಿಂದಿರೊ ನೀವು ?
ಎಂಬಾ ಪ್ರಶ್ನೆ ದಿಗಂತದ ಹೊರಗೆ

ಎಲ್ಲಾ ದಿನದಲಿ ನಮಗರೆಹೊಟ್ಟೆ ?
ಬರೆ ತೆಳಿನೀರಲಿ ದುಡಿವುದೆ ರಟ್ಟೆ ?
ಉಡುವುದು ಮಣ್ಣಿನ ಚಿಂದೀ ಬಟ್ಟೆ
ಹೀಗಾದರೆ ದಿನಗಳೆವುದು ಹೇಗೆ ?
ಎಲ್ಲಿದೆ ತೃಪ್ತಿಯ ಹುರುಪು–ನಗೆ ?

ಹೊಟ್ಟೆಗೆ ಹಿಟ್ಟಿಗೆ ಬೇಕಾದಷ್ಟು
ಬಟ್ಟೆಯ ಮಟ್ಟಿಗೆ ಸಾಕಾದಷ್ಟು
ಉಳಿದರೆ ನಾವ್ ಮಾತಾಡೆವು ಮತ್ತು
ಅಷ್ಟಕೆ ಬಂದಿದೆ ನಮಗೆ ವಿಪತ್ತು

ನಮ್ಮಾ ಬೆವರು ಬಿಸಿ ಕಣ್ಣೀರು
ಸುಯ್ಯುವ ನಿಟ್ಟುಸಿರು
ನಿಮ್ಮ ವಿಲಾಸಕೆ ಸುಖ-ಸಂಪತ್ತಿಗೆ
ಶಾಂತಿಗೆ ಕೊಡದೇಂ ಹೊಗೆ-ಬೇಗೆ ?

ಬೇಸಾಯುವ ನಾವ್ ಹಿರಿದಾಗಿಸಿದರೆ
ಕಷ್ಟದಿ ಬೆಳೆಯನು ಹೇಗೋ ಪಡೆದರೆ
ನೀರನ್ನೆಳೆದು 'ಕೊಳಕೆ'ಯ ಬೆಳೆದರೆ
ಗುಡ್ಡ ಪಸಗೆದು ಹೊಸ ಹೊಲ ಗೈದರೆ
ಏರುವುದವೊ ಮರುವರ್ಷಕೆ ಗೇಣಿ
ಧನಿಗೀಯಲೆ ಬೇಕಾಗಿದೆ ಕಾಣಿ

ನಮ್ಮಾ ಹೊಟ್ಟೆಯ ಉರಿಸಿದರಿಂತು
ಕಣ್ಣೀರಿನ ಹೊಳೆ ಹರಿಸಿದರಿಂತು
ಒಂದೇ ಸಾರಿಗೆ ಎಲ್ಲರು ನಾವು
ಕೃಷಿ ಸನ್ಯಾಸವನಾನುವೆವು
ದುಡಿತಕೆ ದಿಟವಾಗಿರುವ ಜಲೆ
ಪಡೆವೆವು ಅದುವೇ ನಮ್ಮ ನೆಲೆ

ಎಂದಾಗುವುದೋ ರಾಷ್ಟ್ರೋತ್ಕ್ರಾಂತಿ
ಎಂದಿಗೆ ಬರುವುದೊ ಸಮತಾ ಶಾಂತಿ
ಅಂದೇ ನಮ್ಮಾ ನಾಡಿಗೆ ಬೆಳಕು
ಬಂದೇ ಬರುವುದು ಹೊಸ ಥಳಕು
ಅಷ್ಟರವರೆಗೆ ಸುತ್ತಲು ಮುತ್ತಲು
ಸುತ್ತಿದೆ ಮುತ್ತಿದೆ ಬರಿ ಕಗ್ಗತ್ತಲು

□ ೧೯೪೭

ಕುಂಬಳೆ ಪಾರ್ತಿಸುಬ್ಬ

ಯಕ್ಷಗಾನಾಚಾರ್ಯ ! ಓ ಪಾರ್ತಿಸುಬ್ಬನೆ !
ಕುಂಬಳೆಯ ಕಣ್ವಪುರ ಶ್ರೀಕೃಷ್ಣ ಭಕ್ತನೇ !
ಸಂಪೂರ್ಣ 'ರಾಮಚರಿತೆ'ಯ ಹಾಡಿ ಕೃತಿ ರಚಿಸಿ
ಜನರಿಂದ 'ಶ್ರೀ ಯಕ್ಷಗಾನ ವಾಲ್ಮೀಕಿ'ಯೆಂ–
ಬುನ್ನತದ ಬಿರುದನ್ನು ತಾನಾಗಿ ದೊರಕಿಸಿದೆ
ಕೃಷ್ಣನಲಿ ನಿನಗಿರುವ ಶುದ್ಧ ಭಕ್ತಿಯ ಹಿರಿಮೆ
'ಕೃಷ್ಣ ಚರಿತೆ'ಯು ಕೃಷ್ಣಲೀಲೆಯಲಿ ಕೃತಿಗೊಂಡು
ದಾಸಪಂಥದ ಭಕ್ತಕವಿ ಪಂಕ್ತಿಯಲಿ ನಿನಗೆ
ಅಗ್ರಪಟ್ಟದ ಮಣೆಯು ಶಾಶ್ವತಂ ಸಂದತ್ತು

ತೆಂಕುತಿಟ್ಟಿನ ಯಕ್ಷಗಾನ ಬಯಲಾಟದಲಿ
ನವಸೃಷ್ಟಿಯನು ಗೈದ ಕಲೆಗಾರನೆನ್ನಿಸಿದೆ
ರಸಿಕ ಜನ ಮಾನಸಕೆ ಸಂಜೀವನವನೆರೆದೆ
ಪಾರ್ವತೀ ನಂದನನೆ ! ನಿನ್ನಿಂದ ನಿನ್ನಬ್ಬೆ
ಧನ್ಯೆ ಪಾರ್ವತಿಯ ಹೆಸರು ರಸಿಕ ಜನ ಜಿಹ್ವೆಯಲಿ
ಸಂತತಂ ನಲಿನಲಿಯುವಂತಾಯ್ತು

ನಿನ್ನ ರಸಕೃತಿಗಳಲಿ ಮೂಡಿ ಪೈವೆತ್ತಿರುವ
ಕೈಕೆ–ಮಂಥರೆ–ಸೀತೆ–ರಾಮ ಸೌಮಿತ್ರಿಯರು,
ಕೌಸಲ್ಯೆ–ದಶರಥರು, ಶೂರ್ಪನಖಿ–ತಾರೆಯರು,
ವಾಲಿ–ಸುಗ್ರೀವ–ಹನುಮಂತ–ಶುಕ–ಸಾರಣರು,
ಮಂತ್ರಿ ಪ್ರಹಸ್ತ–ದೂತಾಂಗದರು. ರಾವಣನು,
ಜನಮನೋಭಿತ್ತಿಯಲಿ ಚಿತ್ರವಾಗಿರುತಿಹರು.
ನೀನೆಮಗೆ ಬಹುಮಾನ್ಯ. ನಿನಗಕ್ಕೆ ಮಂಗಳಂ.

□ ೧೯೬೧

ಮುದ್ದಣ ಕವಿ

ಕನ್ನಡದ ನಂದನವು ಕಮರಿದಂತಿತ್ತು
ಗದ್ಯ ಸೌರಭವೆಲ್ಲ ಉಡುಗಿ ಮುಗ್ಗಿತ್ತು
ಸಾಹಿತ್ಯ ಮಾಧುರ್ಯ ಮುಗಿದೆ ಹೋಗಿತ್ತು
ನವ್ಯತೆಯು ಭವ್ಯತೆಯು ಮಾಯವಾಗಿತ್ತು
ಸವಿನುಡಿಯ ಸರಸತೆಯು ಸವೆದು ಸಂದಿತ್ತು
ಷಟ್ಪದಿಯ ಝೇಂಕಾರ ಮೂಗುವಡೆದಿತ್ತು
ಯಕ್ಷಗಾನವು ರೂಕ್ಷಪಥವ ತುಳಿದಿತ್ತು

—ಇಂತೆಲ್ಲ ಬಗೆಯಿಂದ ಕನ್ನಡದ ಹೊನ್ನುನೆಲ
ಬರಡು ಮಣ್ಣಾಗಿ ಮರುಭೂಮಿಯಾಗಿರಲು
ಹಳೆಯ ಕಾವ್ಯಗಳಲ್ಲಿ ತಂಪೆಲ್ಲಿ ನೆಳಲೆಲ್ಲಿ
ಎಂದು ಕನ್ನಡ ಪಾಂಥ ತೊಳತೊಳಲುತಿರಲು—

ಸಾಹಿತ್ಯ ಸರಸಿಯಲಿ ಆನಂದರಸವಿಂಗಿ
ರಸಿಕರೆದೆ ಗಾರಾಗಿ ಬಾಯಾರುತಿರಲು
ಕನ್ನಡದ ಚಾತಕವು ಕೊರಳೆತ್ತಿ ಬಾಯ್ಬಿಟ್ಟು
ಸ್ವಾತಿರಸವೃಷ್ಟಿಯನು ಹಾರೈಸುತಿರಲು—

ಹೊಸ ಸೃಷ್ಟಿ ಚೇತನದ ಕಣ್ಣಾಗಿ ಬೆಳಕಾಗಿ
ನವ್ಯ ಸಾಹಿತ್ಯದುರು ಹರಿಕಾರನಾಗಿ
ತೆಂಕು–ಪಡು ಕನ್ನಡದ ತುಳುನಾಡ ಮಡಿಲಿಂದ
ಮೂಡಿದನು 'ಮುದ್ದಣ್ಣ ಕವಿ' ಪುಣ್ಯದಿಂದ

ಕನ್ನಡದ ಸಕ್ಕದದ ವ್ಯಾಸಂಗ ಮಗ್ನತೆಯ
ಧ್ಯಾನ ಮೌನದ ಕನಸು ಸಿದ್ಧಿಯಾದಂತೆ
ತನ್ನ ಪ್ರತಿಭೆಯ ಹೊನ್ನ ಮಿಂಚು ಸಂಚಯಗೊಂಡು
ಕೃತಿ ರೂಪ ಫಲವಾಗಿ ಮಾಗಿ ನೆರೆದಂತೆ

ಬಣ್ಣನೆಯ ಸವಿಸೊಗಸು ಮೈವೆತ್ತು ನಿಂದಂತೆ
ನವರಸದ ಇನಿವಾಲು ಉಕ್ಕಿ ಬಂದಂತೆ
ಸಾಹಿತ್ಯ ಸುಮನಸಂಗೊದವಿಸಿದ ಸುಧೆಯಂತೆ
ಐದು ಕೃತಿ ಕುಸುಮಗಳು ಬಿರಿದರಳಿ ಬಂತೇ ?

'ಗದ್ಯಂ ಕವೀನಾಂ ನಿಕಷಂ ವದಂತಿ'
ಎಂಬ ಮಾತಿಗೆ ತಾನೆ ಒರೆಗಲ್ಲು ಎನಿಸಿ
'ರಾಮಾಶ್ವಮೇಧ'ದಂತಹ ಮೇರುಕೃತಿಯನ್ನು
ಮುಡಿಸಿದನು ಕನ್ನಡದ ಮುಡಿಗೆ ತೊಡವೆನಿಸಿ

ಮುದ್ದಣ ಮನೋರಮೆಯ ಸಂವಾದ ಸರಸತೆಯು
ಶೃಂಗಾರ ವಲ್ಲರಿಯ ಮೈಕುಣಿಸಿತು
ಸೀತಾವಿಲಾಪದಲಿ ಕರುಣರಸ ಹೊನಲಾಗಿ
ಓದುಗರ ಕಣ್ಣಿನಲಿ ಕಂಬನಿಸಿತು

'ಕರ್ಮಣಿಯ ಸರದಲ್ಲಿ ಚೆಂಬವಳ ಕೋದಂತೆ'
ಕನ್ನಡದಿ ಸಂಸ್ಕೃತವು ಮಿರುಗುಗೊಂಡತ್ತು
'ಸಾಮಾನ್ಯ ಚಿತ್ರಕ್ಕೆ ಸೌವರ್ಣ ಚೌಕಟ್ಟು'
ಮುದ್ದಣ–ಮನೋರಮೆಯ ಸಂವಾದವಾಯ್ತು

'ಶ್ರೀರಾಮ ಪಟ್ಟಾಭಿಷೇಕ'ದಲಿ ಜೈಮಿನೀ
ಭಾರತದ ಷಟ್ಪದಿಯ ಮೀರಿಸಿದನು
ಯಕ್ಷಗಾನದ 'ವಿಜಯ' 'ಕಲ್ಯಾಣ' ಕೃತಿಯೆರಡ
ಕೃತಿಸಿ ಯಕ್ಷರ ತಲೆಯ ತೂಗಿಸಿದನು

ಬಡತನದ ಕುಲುಮೆಯಲಿ ಭಾವನೆಯ ಪುಟಪಾಕ
ಪುತ್ಥಳಿಯ ಬಂಗಾರವಾಗಿ ಬಂತು
ದಕ್ಷಿಣದ ಕನ್ನಡದ ಕಿರುಹಳ್ಳಿ 'ನಂದಳಿಕೆ'
ಅಮರತೆಯ ಸ್ಪೈಪನ್ನು ತಳೆಯಿತಂತು

□ ೧೯೫೪

ಸಹೃದಯೆ ಮನೋರಮೆ

ಮುದ್ದಣ ಮನೋಜನ್ಯೆ ರಸಿಕ ಜನ ಸನ್ಮಾನ್ಯೆ
ಓ ಮುಗ್ಧ ಮೋಹನೆ ! ಮನೋರಮೆ ! ಮನೋಹರೆಯೇ !
ನೀನನನ್ಯೆ ಸಹೃದಯೆ ಕಲಾಕನ್ಯೆ
ಕನ್ನಡದ ಕಸ್ತೂರಿ ತಿಲಕವಿಟ್ಟಿರುವೆ
ಸಕ್ಕದದ ಚೆಂಬವಳನಿಂಬಿನಿಂ ಕೋದಿರುವ
ಕನ್ನಡದ ಕರಿಮಣಿಯ ಪೊನ್ನ ಪಸದನದಿಂದ
ಶೋಭಿತೋರಸ್ಥಲೇ ! ರಸಿಕ ಜನ ವತ್ಸಲೇ !
ಮುದ್ದಣನ ಚಿತ್ಕಲೇ ! ಸಹೃದಯೆ ಮನೋರಮೆ !

ಮನೆಮನೆಗೆ ಪಾಯಸಂ ರಸ ವಸಂತೋತ್ಸವಂ
ಓ ಮನೋರಮೆ ! ನಿನ್ನ ದಯೆಯಿಂದ ನಾವು
ದಾಂಪತ್ಯದಮೃತ ರಸಪಾಕವುಂಡಿಹೆವು
ಗದ್ಯ ಕಾವ್ಯದ ಸೊಬಗುಸೋನೆ ಕಂಡಿಹೆವು

ಕಾರ್ಮೋಡ ಕವಿದಿಹುದು ಕತ್ತಲೆಯು ಮುತ್ತಿಹುದು
ಜೀರ್‌ಕಟ್ಟಿ ಮಳೆ ಸುರಿದು ಮನ ಕೀಸರಿಟ್ಟಿಹುದು
ಮನೆ ಬೇಸರಾಗಿಹುದು ಮುದ್ದಣನ ಮನದಲ್ಲಿ
ರಸಿಕತೆಯ ಬನದಲ್ಲಿ
ಮಾತ್ರ ಚೇತನವುಕ್ಕಿ ಚೆಲುವೊಸರುತಿಹುದು
ಕಾವ್ಯರಸ ಮಡುಗೊಂಡು ದುಂದುಮಿಸುತಿಹುದು
ಮಂಗಲೋತ್ಸವದಲ್ಲಿ ಮನೆ ಮಾಡಿ ನೆಲಸಿಹುದು

ನೋಡದೋ ನೋಡಲ್ಲಿ ಅವನ ಸಮ್ಮುಖದಲ್ಲಿ
ಮಿಂಚು ಸೀರೆಯನುಟ್ಟ ನೀರೆ ಯಾರು ?
ನವ್ಯತೆಯ ಭಾವನೆಯ ಭಾಮೆ ಯಾರು ?

ಅವಳೇ ಮನೋರಮೆಯು ಪ್ರತಿಭಾ ಮನೋಹರೆಯು
ಕಾವ್ಯಾಮೃತಾಸ್ವಾದಕೆಳಸುತಿಹಳು
ಮೈಯೆಲ್ಲ ಕಿವಿಯಾಗಿ ಕೇಳುತಿಹಳು
ಭವ್ಯತೆಯ ರಸಸೃಷ್ಟಿಗೈಸುತಿಹಳು

ಈಗವಳು ರಸವಾಗ್ನೆ ಆನಂದ ಸಂಲಗ್ನೆ
ಕವಿಹೃದಯದೊಡವೆರೆದ ಸಹೃದಯೆ ಮಹೋದಯೆ

ಅಳಿದೊಡಂ ಉಳಿದೊಡಂ ಬಟ್ಟೆದೋರಿಪ ಕತೆಯ
ಹೃದ್ಯಗದ್ಯದಿ ನೀನು ಹೇಳಿಸಿರುವೆ
ಮುಂತಿಲ್ಲ ಪಿಂತಿಲ್ಲವೆನುವಂತೆ ಮೇಯ್ಯಾಂತ
ರಾಮಾಶ್ವಮೇಧವನು ಆಲಿಸಿರುವೆ
ಕಾವ್ಯರಸ ಪೊಗೆವೊಗೆದು ನೀನೀಂಟಿ ತಣಿತಣಿದು
ರೋಮಾಂಚ ಕಂಚುಕವನಾಂತ ಮೇಲೆ
ಉಡುಗೊರೆಯ ಹಾರೈಸಿ ಪೊಗ ನೋಡುತಿಹ ಕವಿಗೆ
ನೀನೇನು ಕೊಟ್ಟಿರುವೆ ಮೆಚ್ಚು ಲೀಲೆ?
ಕವಿಹೃದಯ ಒಲಿದಿರಲು ರಸಪೊಸರಿ ಹರಿದಿರಲು
ಕಾವ್ಯ ಕೃತಿ ಕೊನೆಗೊಂಡು ಬಗೆಯುಂಡು ತಣಿದಿರಲು
ಉಡುಗೊರೆಗೆ ತಡವೇನು ? ತಡೆಯೇನು ? ನೀ ಕೊಡುವೆ

ಓ ಮನೋರಮೆ! ನಿನ್ನ ಕೈಹಿಡಿದು ಬರಸೆಳೆದು
ತೋಳ ತೆಕ್ಕೆಯೊಳಾನೆ ಕವಿಯು ಒಲಿದು
ನೀನವನಿಗಿಂಬಿತ್ತು ಜೇನ್ದುಟಿಯು ಸವಿತುತ್ತು
ಚಾರು ಚುಂಬನವಿತ್ತೆಯಲ್ಲವೇ ನಲಿದು ?

□ ೧೯೭೦

ತೆಂಗು ತೋಟದ ತೊಟ್ಟಿಲು

ತೆಂಗು ತೋಟದ ತೊಟ್ಟಿಲಲ್ಲಿ
ಹಂಚು ಹೊದಿಕೆಯ ಹೊದೆಯುತ
ಮಂಗಳೂರಿನ ಪೇಟೆ ಪಟ್ಟಿದೆ
ಬಿಂಕ ಬಿನ್ನಣದವೆಸೆಯುತ

ನೀಲ ಶರಧಿಯ ತೆರೆಯ ಬೆಳ್ಳಿಯ
ಜರಿಯ ನಿರಿಗೆಯ ಸೀರೆಯ
ಉಟ್ಟ ವಯ್ಯಾರವು ಮನೋಹರ–
ವಾಯ್ತು ಬೆಡಗಿನ ನಗರಿಯ

ಹೊಳೆಯ ನೇತ್ರಾವತಿಯ ಸೆರಗಿನ
ಶೋಭೆ ಕಣ್ಗಳ ಸೆಳೆವುದು
ರಾತ್ರಿ ಮಿಂಚಿನ ದೀಪದಾಭರ–
ಣಂಗಳೋಳಿಯು ಮೆರೆವುದು

ಹಸಿದರುಂಬರು ಮಿರುಗು ಮುತ್ತಿನ
ತೆರದಿ ಶೋಭಿಸುವನ್ನವ
ತೃಷಿತರಿಂಟುವರಿಸಿದು ಸೊದೆಯನು
ಮೀರಿಪೆಳೆ ಸೀಯಾಳವ

ಬಾಳೆ–ಪೇರಳೆ–ಮಾವು–ಕಿತ್ತಳೆ
ಹಣ್ಣನಂಗಡಿಯೆಸೆವುವು
ಮೊಲ್ಲೆ–ಮಲ್ಲಿಗೆ–ಜಾಜಿ–ಸಂಪಗೆ
ಹೂವಿನಂಗಡಿ ನಗುವುವು

ಕೋಟ- ಹವಿಕರ ಕನ್ನಡದ ನುಡಿ–
ಯೊಡನೆ ತುಳುವರ ತುಳುವುಲಿ
ಗೌಡಸಾರಸ್ವತರ ಕೊಂಕಣಿ
ಬೆರೆತಿರುವುದೇಕತೆಯಲಿ

ಕ್ರೈಸ್ತ-ಮುಸ್ಲಿಮರೆಲ್ಲರೂ ಕ-
ನ್ನಡವ ಹಿಂದುಗಳಂತೆಯೆ
ಕಲಿತು ವಿದ್ಯೆಯ ಸಿರಿಯ ಸಾಧಿಸಿ
ಮೆರೆವರೊಂದೇ ರೀತಿಯೆ

ಕೆಂಪು ಹಂಚಿನ ತವರುಮನೆಯಿದು
ಕಂಪು ಮಲ್ಲಿಗೆ ತಾಯ್ಮನೆ
ಗಳಿಗೆ ಗಳಿಗೆಗೆ ಹೊಸತು ಬೆಡಗಿನ
ಹುಡುಗಿಯರಿಗಿದು ನೆಲೆಮನೆ

ಮುಗಿಲ ಮುಟ್ಟುವ ಸೌಧಗಳ ನೆರೆ-
ಯಲ್ಲಿ ಬಡವರ ಗುಡಿಸಲು
ಸಿರಿಯ ನಗು ನಲವುಗಳ ಮರೆಯಲಿ
ಬಡವರಳುವರು ಸುತ್ತಲು

□ ೧೯೪೬

ಸಂಗೀತ ಶಾರದೆ

ದರಹಾಸೋಜ್ವಲ ವದನದಲಿ
ಸರಸ ವಿಲೋಕನ ಲಾಸ್ಯದಲಿ
ಸುಲಲಿತ ಶ್ವೇತ ಕಪೋಲದಲಿ
ಅಲಕ ವಿಚಿತ್ರಿತ ಫಾಲದಲಿ
ಶೋಭಿಪ ಶಾರದೆ ಕುಳಿತಿಹಳು
ಅಭಯ ಕರಾಬ್ಜದಿ ಹರಸುವಳು

ಶ್ವೇತಾಂಬರವನು ತಾನುಟ್ಟು
ಮುತ್ತಿನ ಮಾಲಿಕೆಯನು ತೊಟ್ಟು
ಕರಧೃತ ಸುರುಚಿರ ವೀಣೆಯಲಿ
ವರ ಸಂಗೀತವ ನುಡಿಸುತಲಿ
ಶೋಭಿಪ ಶಾರದೆ ಕುಳಿತಿಹಳು
ಅಭಯ ಕರಾಬ್ಜದಿ ಹರಸುವಳು

ಸಂಜನಿತಾನಂದೋರ್ಮಿಯಲಿ
ಮಂಜುಲ ವೃಕ್ಷ ಚ್ಛಾಯೆಯಲಿ
ಕೃಷ್ಣಶಿಲಾ ದೃಢ ಪಟ್ಟದಲಿ
ಹೃಷ್ಟ ಮಯೂರದ ಸನಿಯದಲಿ
ಶೋಭಿಪ ಶಾರದೆ ಕುಳಿತಿಹಳು
ಅಭಯ ಕರಾಬ್ಜದಿ ಹರಸುವಳು

ಸಂಗೀತಾಮೃತ ಲಹರಿಯಲಿ
ವಿಶ್ವವ ತನ್ಮಯಗೊಳಿಸುತಲಿ
ನಾದ ಬ್ರಹ್ಮದಿ ತೇಲಿಸುತ
ಸಾದರದಲಿ ಸೊಗವಡಿಸುತ್ತ
ಶೋಭಿಪ ಶಾರದೆ ಕುಳಿತಿಹಳು
ಅಭಯ ಕರಾಬ್ಜದಿ ಹರಸುವಳು

□ ೧೯೪೦

ಬೋಧಿ ವೃಕ್ಷ

ಇದು ಪುರಾತನವಾದ ಅಶ್ವತ್ಥವೃಕ್ಷ
ಬುದ್ಧನಿಂದೆನಿಸಿತಿದು ಬೋಧಿ ವೃಕ್ಷ
ನೂರಾರು ಜೀವಿಗಳಿಗಾಶ್ರಯವಿದರ ವಕ್ಷ

ಹಲವು ಶತಮಾನಗಳು ಸಹಸ್ರಮಾನಗಳು
ಕಳೆದರೂ ನವನವೀನ
ಹಳೆಯತನವಿದಕಿಲ್ಲ ಚಿರನೂತನ

ನೂರಾರು ಕೊಂಬೆರೆಂಬೆಗಳಿಹವು ಕವಲುಕವಲಾಗಿ
ಹರಡಿಹವು ಶಾಖೋಪಶಾಖೆಗಳು ಜಟಿಲವಾಗಿ
ಲಕ್ಷೋಪಲಕ್ಷ ಕೋಟ್ಯಾನುಕೋಟಿ ಪತ್ರಗಳು
ಚೆಲುವಾದ ಮೆಲುಪಾದ ತಳಿರು--ಚಿಗುರುಗಳು
ಇಡಿಕಿರಿದು ಸಂಕೀರ್ಣ ಸತ್ವಯುಕ್ತ
ಅಡಿಯಿಂದ ಮುಡಿವರೆಗೆ ಸಾರಸಿಕ್ತ
ದಿಗ್ದಿಗಂತಕೆ ವ್ಯಾಪ್ತವಾದ ಹಲವಾರು
ಮುಖಗಳಿದ್ದರು ಕೂಡ ಹೃದಯವೊಂದೆ
ಜೀವರಸವೊಂದಾಗಿ ಹರಿಯುತಿಹುದು
ಚೈತನ್ಯ ಚಿಮ್ಮುತಿಹುದು

ಎಷ್ಟೋ ಶುಕಗಳು ಬಂದು ಹಣ್ಣು ತಿಂದು
ಎಷ್ಟೋ ಪಿಕಗಳು ಬಂದು ತಳಿರ ಮೆದ್ದು
ಹೋದರೂ ಮರಕಿಲ್ಲ ಕುಂದುಕೊರತೆ
ಜಿನುಗುತಿದೆ ಏಕರಸ ಜೀವನೊರತೆ
ದಶದಿಕ್ಕುಗಳಿಗಿದರ ಗೆಲ್ಲು ಹರಡಿ
ತಣ್ಣೆಳಲ ತಂಪು ನೀಡಿ
ಲೋಕೋಪಯೋಗಿಯೆನೆ ನೆಗಳಿ ನಿಂತು
ಕೀರ್ತಿ ಪ್ರತಿಷ್ಠೆಗಳ ಋದ್ಧಿ ಬಂತು

ನಿರ್ಬುದ್ಧಿ ವಾನರರ ವೃಂದ ಬಂದು
ಪತ್ರಯುತ ಶಾಖೆಗಳ ಮುರಿದುವಂದು

ಕೆಲವು ಕಪಿಗಳು ಇಲ್ಲಿ ಬಂದು ಮನೆ ಮಾಡಿ
ಮರವನ್ನೆ ಸ್ವಾಧೀನ ಮಾಡಿದುವು ನೋಡಿ
ಸಾಗರೋತ್ತರದಿಂದ ಹಾರಿ ಬಂದು
ಕಡಲ ಬಳಿ ಕಾಗೆಗಳು ಹಣ್ಣು ತಿಂದು
ಮರವನ್ನೆ ಸೂರೆ ಮಾಡಿದುವು
ಎಲೆಗಳನು ಕಿತ್ತೆಸೆದುವು
ಹಣ್ಣುಗಳ ಹೊತ್ತೊಯ್ದುವು
ಟೊಂಗೆಗಳ ಮುರಿ ಮೊಗೆದುವು
ವಸ್ತ್ರವನು ಕಳ್ಳರ ಕದ್ದೊಯುತ್ತ
ಇತ್ತ ಚೆ ಇಬ್ಬದಿಯ ಕಲ್ಲು ಬಿತ್ತು
ಆದರೂ ದಣಿವರಿದೆ ನೋವ ಸತ್ತು

ಕಳೆಯಿತು ಶಿಶಿರ
ಬಂತು ವಸಂತ

ಚಿಗುರುಗಳೆಸೆದುವು ಕೆಂಪಾಗಿ
ಕವಲುಗಳೊಡೆದುವು ಸೊಂಪಾಗಿ
ಜವನಿಕೆ ಸರಿಸ ಬಹೆ ಮೋಗ ತ್ಯಾರಿ
ಕೇಳುತ ಮೋಹನ ರಾಗದ ಸೂರೆ

ಪಕ್ಷಿಗಳೆಲ್ಲವು ಗೂಡ ಬಟಿಸಿದುವು
ಹುರುಪಿನ ರೆಕ್ಕೆಯ ಪಟಪಟಿಸಿದುವು
ಸಾಮದ ಗೀತವ ಹಾಡಿದುವು

□ ೧೯೭

ಪಡಿದನಿ

ದೃಷ್ಟಿ ಸೃಷ್ಟಿಗಳಿಂದ ಭಾವಾಂತರಂಗದಿಂ
ಧ್ವನಿಯೆದ್ದು ಪಡಿದನಿಯು ಕೇಳಿ ಬಂತು
ಅನುಕೂಲ ಕಾಲಕ್ಕೆ ಪ್ರತಿಕೂಲ ಸ್ಥಲಕ್ಕೆ
ಭಾವ ವಾಹಿನಿ ಹೊರಟು ಪ್ರದರ್ಶನಿಸುತಿತ್ತು

ನನ್ನ ಮನವನು ಕಲಕಿದೊಂದು
ಭಾವಸ್ಫುರಣ
ರಸಿಕ ಸಹೃದಯ ಚಿತ್ತ ಭಿತ್ತಿಯಲ್ಲಿ
ಹೊಡೆದಿದ್ದು ಅನುರಣನ ಪಡಿದನಿಯ-
ನೆಬ್ಬಿಸಿ

ಕವಿಹೃದಯ ಧನ್ಯತೆಗೆ ಯಾರು
ಹೊಗುವರು.

ರಸಿಕಜನ ಮಾನಸದ ರಸ
ಸರೋವರದಲ್ಲಿ
ಆನಂದ ಅಲೆಗಳ ಮರ್ಮರ ಧ್ವನಿಗೆ
ಈ ಕವನ ಕೋಗಿಲೆಗಳುಲ್ಲಾಸ ಗೀತಗಳು
ಹಾಯುತಿರಲನವರತ.
ಪಡಿದನಿಯ ಕೊಡುಗೆ

□ ೧೯೭೨.

ಸಾಹಿತ್ಯ ಸೂತ್ರ

ಕವಿಕರ್ಮದಲಿ ಹಳತು - ಹೊಸತೆಂಬ
ಯಾವದು
ಹುರುಳಿ ಕಾಣೆ ನಡೆನಗೆ, ಭಾವವೇ ಜೀವ
ಹಳತೇನು? ಹೊಸತೇನು?
ಯಾವುದೆದೆಯರಳುವುದೊ
ಬಾಳ್ ಮೇಳೈಸುವುದೋ ಅದೆ
ಭವ್ಯ ಕಾವ್ಯ.
ಕವಿತೆಯು ಭಾವ ಪ್ರಧಾನ
ಉತ್ತಮ ಗುಣಾಢ್ಯ
ಓದಿದೊಡನೆ ಹೃದ್ಯಾನಂದ ಪಡೆದು,
ತಮ್ಮ ಬಾಳ್ಗೊಳಲಿನ ನ್ಯೂನ್ಯ ಕಾಲದಿ
ಮರೆತರದುವೇ ಫಲವು ಸಾಹಿತ್ಯಕಿದುದು.

ಸ್ವಾನುಭವ ಜಲಧಿಯಂ ಸಾಗರವ
ಆನಂದ ಸುಧೆಯೊಡನೆದು ಮಥಿಸದರೆ
ಮನ ತಣಿಸದೇನು?
ಸಾಹಿತ್ಯ ಸುಮನಸರು ಸುಧೆ ಸವಿದು,
ಸೊಗ ಪಡೆದು,
ಬಾಳಿಯನೇ ಸಗ್ಗವಂತೆ ಮರಹರೇನು?
□ ೧೯೪೨

ಕವನ ಗಾಯತ್ರಿ

ಆ ದೇವ ಸವಿತಾರ-
ನಾ ದಿವ್ಯ ತೇಜವನು
ನೆನೆಯುವೆನು ನಮಗೆ
ಧೀಶಕ್ತಿಯನು ಚೋದಿಸಲಿ.

□ ೧೯೩೭

ಬೆಳಕು.

ನಮ್ಮ ಜೀವನವೆಲ್ಲ ಹಾಲುಗಡಲಾಗಿರಲಿ
ಅಲ್ಲಿ ಚೇತನದೈವ ಬೆಳ್ಬೆಳಗುತಿರಲಿ

ಮನದಿ ಸತ್ಯದ ಬೆಳಕು ದೂರ ಹೊಮ್ಮಿ
ನಿಂದಿರಲು
ಭಾವದಲಿ ಶಿವನ ಸಾನ್ನಿಧ್ಯ ಸಲ್ಲುವುದು.
ಸತ್ಯ ಶಿವ ಸುಂದರದ ನಿಷ್ಕಪಟದಂತಿರಲು
ಅನುಭಾವ ದರ್ಶನಂ ಸ್ಫುರಣಗೊಳ್ಳುವುದು.

ದಯೆಯು ಧರ್ಮದ ಮೆರುಗು
ಕ್ಷಮೆಯೆ ಕ್ಷೇಮದ ಬೆಳಗು
ಶ್ರದ್ಧೆಯೇ ಸಾಧನೆಯ ಸಿದ್ಧಿ ಮಾರ್ಗವಿದೆ.
ಉತ್ಸಾಹವೇ ಕಾರ್ಯ ಸಾಫಲ್ಯ ಸೋಪಾನ
ಆಲಸ್ಯ ಜಡತೆಯೇ ಸಾವಿಗೆ ಸಮಾನ.

ಲೋಕವೇ ಕಣ್ಗೆ ಕಾಣುವ ದೇವರೂಪವಿದು
ಲೋಕಸೇವೆಯೆ ದೇವಪೂಜೆಯಾಗುವುದು.
ವಿಶ್ವೇಶನ ಮಕ್ಕಳೇ ನಾವು ಸೋದರರು
ಈ ಭಾವವೈಶಾಲ್ಯವೆ ಮನ ತಾರಕವು.

ನಮ್ಮ ಜೀವನವೆಲ್ಲ ಹಾಲುಗಡಲಾಗಿರಲಿ
ಅಲ್ಲಿ ಚೇತನದೈವ ಬೆಳ್ಬೆಳಗುತಿರಲಿ.

□ ೧೯ ೮-೪

ಅಮ್ಮೆಂಬಳ ಕೃತಿಗಳು

ಕಾವ್ಯ - ಕವನ

ಕನ್ನಡ ಕುಮಾರ ಸಂಭವ (ಕಾವ್ಯಾನುವಾದ)
ನರ (ಕವನ ಸಂಕಲನ)
ಬಾಳ ಗೆಳತಿ. (ಶೃಂಗಾರ ಕವನ ಸಂಕಲನ)
ಪಡಿದನಿ (ಕವನ ಸಂಕಲನ)
ಜೇನುದನಿ (ಸುಭಾಷಿತಾನುವಾದ)
ಮಹಾದೇವ ಸ್ತುತಿ ಮಂಜರಿ
ಬೆಳಕು (ಆಯ್ದ ಕವನಗಳು)

ಕಥೆ

ಶ್ರೀರಾಮಾಶ್ವಮೇಧ ಕಥೆ
ಉಪನಿಷತ್ತಿನ ಸಣ್ಣಕಥೆಗಳು
(ಬಹುಮಾನಿತ)
ಅದ್ಭುತ ರಾಮಾಯಣದ ಕಥೆ
ಕಿಶೋರ ರಾಮಾಯಣ

ಸ್ಥಳ ಪುರಾಣ

ಶ್ರೀಕ್ಷೇತ್ರ ಸೋಮೇಶ್ವರ

ನಾಟಕ

ಪ್ರಣಯ ದರ್ಶನ (ವನಜ್ಯೋತ್ಸ್ನೆ)
(ಗೀತರೂಪಕ) [ಬಹುಮಾನಿತ]

ಸಂಪಾದಿತ

ಅಭಿನವ ಸಾಹಿತ್ಯಮಾಲೆ
ಶ್ರೀಗುರುವಾದಿರಾಜರ ಕೀರ್ತನೆಗಳು
ಗುರುದಕ್ಷಿಣೆ (ತೆಕ್ಕುಂಜ ಶಂಕರ ಭಟ್ಟರ ಸ್ಮರಣೆ)

ಕೆಲವು ಅಭಿಪ್ರಾಯಗಳು

"ಇವರ ಕವನಗಳಿಗೆ ಒಂದು ಸರಳತೆಯು ಒಪ್ಪ ಬಂದಿದೆ. ನನಗೆ ವಿಶ್ವಾಸವಾಗಿ ಇವರ ಶೃಂಗಾರಾತ್ಮಕ ಕವನಗಳು ಪ್ರಿಯವಾದ ಕಾವ್ಯವಾದವು"

ದ. ರಾ. ಬೇಂದ್ರೆ.

"ಅಮ್ಮೆಂಬಳರ ಮನೋಧರ್ಮ ಸಾತ್ವಿಕವಾದದ್ದು. ಇವರ ಬರವಣಿಗೆಯಲ್ಲಿ ಯಾವ ಚಮತ್ಕಾರವಿಲ್ಲ. ಪಾಂಡಿತ್ಯ ಪ್ರದರ್ಶನದ ಚಾಪಲ್ಯವಿಲ್ಲ. ಹೇಳುವ ಮಾತು ಸ್ಪಷ್ಟವಾಗಿರಬೇಕು. ಶುದ್ಧವಾಗಿರಬೇಕು. ಇಷ್ಟವಾಗಿರಬೇಕು. ಇದು ನಾನು ಕಂಡ ಹಾಗೆ ಇವರ ಬರವಣಿಗೆಯ ಸ್ವಭಾವ."

— ಪ್ರೊ. ಎಸ್. ವಿ. ಪರಮೇಶ್ವರ ಭಟ್ಟ

"ಇವರು ಪ್ರಕಟಿಸಿರುವ ಕವಿತಾ ಸಂಗ್ರಹಗಳು ಇವರ ಕಾವ್ಯಮನೋಧರ್ಮ, ಹೃದಯವಂತಿಕೆ, ಇವರ ಮತ್ತು ರಸಜ್ಞತೆಗೆ ನಿದರ್ಶನವಾಗಿವೆ. ಇವರು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿರುವ ಕೃತಿಗಳು ಇವರ ಉಭಯ ಭಾಷಾ ಪಾಂಡಿತ್ಯದ ನಿಖರತೆ, ಕನ್ನಡ ಶಬ್ದಗಳ ಕಸುವಿನ ಅರಿವು, ಸಹೃದಯನಿಗೆ ನೇರವಾಗಿ ಮುಟ್ಟುವ ಶೈಲಿ ಇವುಗಳ ಜ್ವಲಂತ ಉದಾಹರಣೆಗಳಾಗಿವೆ"

— ಗೊರೂರು ರಾಮಸ್ವಾಮಿ ಅಯ್ಯಂಗಾರ್

"ದ. ಕ. ಜಿಲ್ಲೆಯ ತೆಂಕಣಗಾಳಿಯೊಂದಿಗೆ ಬೀಸುವ ಕಂಗಾಳಿಯನ್ನು ಬೀಸಿ, ಎಲ್ಲೆಡೆಯ ರಸಿಕರನ್ನು ತನ್ನೆಡೆಗೆ ಸೆಳೆದ ಕವಿ ಅಮ್ಮೆಂಬಳರು ಸಾರಸ್ವತ ಜಗತ್ತಿನಲ್ಲಿ ದೊಡ್ಡ ಸಂಪತ್ತು."

— ಡಾ. ಸಿ. ಹೊಸಬೆಟ್ಟು

ಅಷ್ಟೆಂಬಳ್ಳರ "ಬಾಳಗೆಳ್ಳತಿ" ಸಂಕಲನದ ಕೆಲವು ಪ್ರೇಮಗೀತೆಗಳು ನಿಜಕ್ಕೂ ರಮ್ಯವಂಥ ಕನ್ನಡಕ್ಕೆ ಕೊಟ್ಟ ಕೆಲವು ಉತ್ತಮ ರಚನೆಗಳಿಗೆ ಸೇರುತ್ತವೆ. ಅನುಭವದ ಒತ್ತು, ಮಣ್ಣಿನ ಸಂಪರ್ಕ ಅವರ ಪ್ರೇಮಕವಿತೆಗಳಲ್ಲಿ ಬರುತ್ತವೆ.

– ಡಾ| ನಾ. ಮೊಗಸಾಲೆ

ಸಾಹಿತ್ಯಾಂಜಲಿ ಗ್ರಂಥಮಾಲೆಯ ಪುಸ್ತಕಗಳು.

ಕನ್ನಡ ಕುಮಾರ ಸಂಭವ. ಅ. ಶಂ. ನಾವಡ
ಸರ (ಕವನ ಸಂಕಲನ) ,, ,,
ಪ್ರಣಯ ದರ್ಶನ (ಗೀತ ನಾಟಕಗಳು) .
ರಾಮಾಶ್ವಮೇಧ ಕಥೆ ,, ,,
ಪಡಿದನಿ (ಕವನ ಸಂಕಲನ) ,, ,,
ಬಾಳ ಗೆಳತಿ (,, ,,) ,, ,,
ಜೇನು ಹನಿ (ಸುಭಾಷಿತಗಳು) ,, ,,
ಉಪನಿಷತ್ತಿನ ಸಣ್ಣ ಕಥೆಗಳು ,, ,,
ದುಂಡು ಮಲ್ಲಿಗೆ ಅನಂತಯ್ಯ ನಾವಡ
ಪದ್ಮ ಪರಾಗ ಪದ್ಮನಾಭ ಸೋಮಯಾಜಿ
ರುದ್ರಶಿಲೆ ಸಾಕ್ಷಿ ಅಮೃತ ಸೋಮೇಶ್ವರ
ತುಳು ಪಾಡ್ದನದ ಕಥೆಗಳು. ,, ,,
ಪತ್ರಪುಷ್ಪ (ಕವನ ಸಂಕಲನ)

— ಕಡೆಂಗೋಡ್ಲು ಶಂಕರ ಭಟ್ಟ.

ಬೆನ್ನುಡಿ

..... ನವೋದಯ ಕಾಲದ ಹೊಸಗನ್ನಡದ ಕವಿಪಂಕ್ತಿ ಪಂಕ್ತಿಯಲ್ಲಿ ಶ್ರೀ ಅಮ್ಮೆಂಬಳರಿಗೂ ಯೋಗ್ಯವಾದೊಂದು ಸ್ಥಾನವಿದೆ. ಲಲಿತ ಸುಂದರವಾದ ಶೈಲಿಯ ಹಲವಾರು ಭಾವ ಗೀತೆಗಳನ್ನು ಅವರು ಬರೆದಿದ್ದಾರೆ. ಅವರ ನಿಸರ್ಗ ಪ್ರೀತಿ ಹೆಚ್ಚಿನ ಕವಿತೆಗಳಲ್ಲಿ ಒಡ ಮೂಡಿದೆ..... ಕಾಳಿದಾಸ ಮುದ್ದಣರ ಆರಾಧಕರಾದ ಇವರು ಸಹಜವಾಗಿ ಶೃಂಗಾರ ಕವಿ..... ಜೀವನದ ಮಧುರ ಹುಮ್ಮನಗಳನ್ನು ಪರಿಹರಿಸಲು ಹದಗೊಳಿಸಲು ಕವಿಗೆ ಭಾವನೆಯ ಶೃಂಗಾರ ಬಹಳ ಅವಶ್ಯವೆಂದು ತೋರುತ್ತದೆ. ಶ್ರೀ ಅಮ್ಮೆಂಬಳರ ಸುಂದರ ಶೈಲಿಯ ಸುಂದರ ಭಾವನೆಗಳ ಪ್ರಕೃತಿಪರ, ಶೃಂಗಾರಪರ ಕವಿತೆಗಳು ನಿಜವಾಗಿಯೂ ಆಹ್ಲಾದಕಾರಿಯಾಗಿವೆ ....

ಕಯ್ಯಾರ ಕಿಞ್ಞಣ್ಣ ರೈ.